ನವವಿಧ ಭಕ್ತಿ

(ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥರ
ಉಪನ್ಯಾಸಗಳಿಂದ ಆಯ್ದ ಭಾಗ)



ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಮ್ ॥

ಪ್ರಕಾಶನ :
ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ ರಜತಮಹೋತ್ಸವ ಸಮಿತಿ,
ಬೆಂಗಳೂರು.

ನವವಿಧ ಭಕ್ತಿ

(ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥರ
ಉಪನ್ಯಾಸಗಳಿಂದ ಆಯ್ದ ಭಾಗ)

ಸಂಗ್ರಹಕಾರ :
ಅನಂತಕೃಷ್ಣಾಚಾರ್ಯ

ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ ರಜತಮಹೋತ್ಸವ ಸಮಿತಿ,
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ರಸ್ತೆ,
ಬೆಂಗಳೂರು.

ನವವಿಧ ಭಕ್ತಿ

(ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥರ
ಉಪನ್ಯಾಸಗಳಿಂದ ಆಯ್ದ ಭಾಗ)

ಸಂಗ್ರಹ : ಅನಂತಕೃಷ್ಣಾಚಾರ್ಯ

ಪ್ರಕಾಶಕರು :
ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ ರಜತಮಹೋತ್ಸವ ಸಮಿತಿ,
ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ ರಸ್ತೆ,
ಬೆಂಗಳೂರು.

ಮೊದಲ ಮುದ್ರಣ : 2004
ಪ್ರತಿಗಳು : 1000

ಮುದ್ರಣ : ಹೊನ್ನ-ಪದ್ಮ ಪ್ರಿಂಟರ್ಸ್, ಉಡುಪಿ.



ಶ್ರೀಮದಾನಂದ ತೀರ್ಥರು

ಪ್ರಕಾಶಕರ ನುಡಿ

ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ ರಜತೋತ್ಸವ ಸಮಿತಿಯು -

★ ಈ 'ನವವಿಧ ಭಕ್ತಿ' ಎಂಬ ಪುಸ್ತಕವನ್ನು ಹೊರತರಲು ಒಪ್ಪಿಗೆ ಇತ್ತ ಪರಮಪೂಜ್ಯ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶ ತೀರ್ಥರಿಗೆ ಅನಂತ ಪ್ರಣಾಮಗಳನ್ನರ್ಪಿಸುತ್ತದೆ.

★ ಈ ಪುಸ್ತಕದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತ ಅನಂತಕೃಷ್ಣಾಚಾರ್ಯರಿಗೆ,

★ ಎಷ್ಟೇ ಕಾರ್ಯಗಳಿದ್ದರೂ ಎಲ್ಲವನ್ನೂ ಬದಿಗೊತ್ತಿ ಅಭಿಮಾನದಿಂದ ಸಕಾಲದಲ್ಲಿ ಮುದ್ರಿಸಿಕೊಟ್ಟ ಹೊನ್ನ-ಪದ್ಮ ಪ್ರಿಂಟರ್ಸ್, ಉಡುಪಿ ಇದರ ಮಾಲಿಕರಾದ ಪ್ರಶಾಂತ್ ಶೆಟ್ಟಿಯವರಿಗೆ,


★ ಅಕ್ಷರ ವಿನ್ಯಾಸ ಹಾಗೂ ಮುಖಪುಟ ವಿನ್ಯಾಸವನ್ನು ಮಾಡಿಕೊಟ್ಟ ಪ್ರಸನ್ನಕುಮಾರ್‌ರವರಿಗೆ

ಕೃತಜ್ಞತೆಗಳನ್ನು ಅರ್ಪಿಸುತ್ತದೆ.

ಅಧ್ಯಕ್ಷರು, ಸದಸ್ಯರು

ದಿನಾಂಕ : 24-01-2004

ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ
ರಜತಮಹೋತ್ಸವ ಸಮಿತಿ, ಬೆಂಗಳೂರು



ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರು

ಮೊದಲ ಮಾತು

ಶ್ರೀಕೃಷ್ಣ ಪರಮಾತ್ಮ ಗೀತೆಯಲ್ಲಿ 'ಶ್ರೇಯಾನ್ ದ್ರವ್ಯಮಯಾ ದ್ಯಜ್ಞಾತ್ ಜ್ಞಾನಯಜ್ಞಃ ಪರಂತಪ' ಎಂದು ಎಲ್ಲ ಯಜ್ಞಗಳಿಗಿಂತಲೂ ಜ್ಞಾನಯಜ್ಞ ಅತ್ಯಂತ ಶ್ರೇಷ್ಠವಾದುದೆಂದು, ತನಗೆ ಅತ್ಯಂತ ಪ್ರಿಯವಾದುದೆಂದು ತಿಳಿಸಿದ. ತನ್ನ ಅವತಾರದುದ್ದಕ್ಕೂ ಭಗವದ್ಗೀತೆ, ಉದ್ಧವಗೀತೆಯೇ ಮೊದಲಾದ ಅನೇಕ ಜ್ಞಾನೋಪದೇಶಗಳನ್ನಿತ್ತು ಜ್ಞಾನಯಜ್ಞದ ಮಹತ್ವವನ್ನು ಲೋಕಕ್ಕೆ ತಿಳಿಸಿಕೊಟ್ಟ. ಇಂತಹ 'ಜ್ಞಾನಯಜ್ಞ'ವನ್ನು ತಮ್ಮ ಜೀವನದುದ್ದಕ್ಕೂ, ವಿಶೇಷವಾಗಿ ತಮ್ಮ ಎರಡು ಪರ್ಯಾಯಾವಧಿಯಲ್ಲಿಯೂ ನಡೆಸಿದವರು ಪ್ರಾತಃಸ್ಮರಣೀಯರಾದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು. ಅವರ ಉತ್ತರಾಧಿಕಾರಿಗಳಾಗಿ ಗುರುಗಳ ಪ್ರತಿಬಿಂಬದಂತಿರುವ ನಮ್ಮ ಗುರುಗಳಾದ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರು ತಮ್ಮ ಪ್ರಥಮ ಪರ್ಯಾಯಾವಧಿಯಲ್ಲಿ ಒಂದು ದಿನವೂ ತಪ್ಪದೆ ಅಶ್ವಮೇಧ ಯಾಗದಂತೆ ನಿರಂತರ ಜ್ಞಾನಯಜ್ಞವನ್ನು ನಡೆಸಿ ಶ್ರೀಕೃಷ್ಣ-ಮುಖ್ಯಪ್ರಾಣರನ್ನು ಮೆಚ್ಚಿಸಿದ ಧನ್ಯರು. ಶ್ರೀಪಾದರು ಕೇವಲ ಪ್ರಸಿದ್ಧ ವಿದ್ವಾಂಸರಿಂದ ಪ್ರವಚನಮಾಲಿಕೆಗಳನ್ನು ನಡೆಸಿದ್ದಷ್ಟೆ ಅಲ್ಲದೆ ತಾವು ದಿನವೂ ಪ್ರವಚನವನ್ನು ನಡೆಸಿದ್ದವರು. ಹಾಗೆ ಶ್ರೀಪಾದರು ನಡೆಸಿದ ಉಪನ್ಯಾಸಗಳಲ್ಲಿ ಭಾಗವತ ಸಪ್ತಮ ಸ್ಕಂಧದಲ್ಲಿ ಬರುವ ಪ್ರಹ್ಲಾದ ಚರಿತ್ರೆಯೂ ಒಂದು. ಬಹಳ ವಿಸ್ತಾರವಾಗಿ ಮೂಡಿಬಂದಿರುವ ಈ ಉಪನ್ಯಾಸ ಮಾಲಿಕೆ ನಿಜಕ್ಕೂ ಪ್ರತಿಯೊಬ್ಬ ಸಾತ್ವಿಕರೂ ಆಸ್ವಾದಿಸಬೇಕಾದದ್ದು. ಆದ್ದರಿಂದಲೇ ಸಂಪೂರ್ಣ ಪ್ರಹ್ಲಾದ ಚರಿತ್ರೆಯನ್ನು ಪುಸ್ತಕರೂಪದಲ್ಲಿ ಹೊರತಂದು ಎಲ್ಲ ಸಾಧಕರ ಕೈಗೊಪ್ಪಿಸಬೇಕೆಂಬುದು ಶ್ರೀ ವಿದ್ಯಾಧೀಶ ತೀರ್ಥ ಪೀಠಾರೋಹಣ ರಜತಮಹೋತ್ಸವ ಸಮಿತಿಯ ಉದ್ದೇಶ. ಆದರೆ ಸಮಯಾಭಾವದಿಂದ ಸದ್ಯಕ್ಕೆ ಸಂಪೂರ್ಣ 'ಪ್ರಹ್ಲಾದ ಚರಿತ್ರೆ'ಯನ್ನು ಸಾಧಕರ ಬಳಿ ಕೊಂಡೊಯ್ಯಲಾಗದಿದ್ದರೂ ಅದರಲ್ಲಿ ಬರುವ 'ನವವಿಧ ಭಕ್ತಿ'ಯೆಂಬ ರಸಬಿಂದುವೊಂದನ್ನು ಸಾಧಕರ ಮುಂದಿಡುವ ಪ್ರಯತ್ನವನ್ನು ಈ ಪುಸ್ತಕ ಮಾಡಿದೆ. ಸಂಪೂರ್ಣ ಪ್ರಹ್ಲಾದ ಚರಿತ್ರೆಯೂ 'ಶ್ರೀ ವಿದ್ಯಾಮಾನ್ಯ'ರ ಆರಾಧನೆಯಂದು ಸಾಧಕರ ಕೈಸೇರಲಿದೆ.

ನಮ್ಮ ಗುರುಗಳಾದ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರ ರಜತ ಮಹೋತ್ಸವ ಸಂದರ್ಭದಲ್ಲಿ ಈ ಕೃತಿಯನ್ನು ಹೊರತರುತ್ತಿರುವುದು ಅತ್ಯಂತ ಖುಷಿಯ ಸಂಗತಿ. ಏಕೆಂದರೆ, ಶ್ರೀಪಾದರಲ್ಲಿ ಈ ನವವಿಧ ಭಕ್ತಿ ಎದ್ದು ಕಾಣುವಂಥದ್ದು. ಶ್ರೀಪಾದರು ಸ್ವತಃ ವಿದ್ವಾಂಸರಾಗಿದ್ದರೂ ತಮ್ಮ ಪರ್ಯಾಯಾವಧಿಯಲ್ಲಿ ಪ್ರತಿದಿನವೂ ವಿದ್ವಾಂಸರ ಉಪನ್ಯಾಸವನ್ನು ಆಲಿಸುತ್ತಾ ಶ್ರವಣಕ್ಕೆ ಮಹತ್ವವನ್ನಿತ್ತವರು. ಪೂಜೆ, ವಿವಿಧ ಜವಾಬ್ದಾರಿಗಳು, ಸಾರ್ವಜನಿಕ ಭೇಟಿ. ಹಲವು ಯೋಜನೆಗಳು ಹೀಗೆ ಅನೇಕ ಕಾರ್ಯಕ್ರಮಗಳಿದ್ದರೂ ಪ್ರತಿದಿನವೂ ತಪ್ಪದೆ ಸುಮಾರು 5-6 ಗಂಟೆಗಳ ಕಾಲ ಪಾಠ-ಪ್ರವಚನವನ್ನು ನಡೆಸುತ್ತಾ ಕೀರ್ತನೆಗೆ ಒತ್ತು ನೀಡಿದವರು. ಶ್ರೀಪಾದರು ತಾವು ಕೃಷ್ಣನನ್ನು ಸ್ಮರಿಸಿದ್ದಲ್ಲದೆ ಲಕ್ಷ ಲಕ್ಷ ಭಕ್ತರಿಂದ ಶ್ರೀಕೃಷ್ಣಮಂತ್ರ ಜಪಿಸುವಂತೆ ಮಾಡಿ ಸ್ಮರಣೆಗೆ ಒತ್ತುಕೊಟ್ಟವರು. ಶ್ರೀಕೃಷ್ಣನ ಪಾದಾರಾಧನೆಗಾಗಿಯೇ ದೀಕ್ಷೆ ತೊಟ್ಟ ಶ್ರೀಪಾದರಲ್ಲಿ ನವವಿಧ ಭಕ್ತಿಯ ನಾಲಕ್ಕನೆಯ ಮೆಟ್ಟಿಲಾದ ಪಾದಸೇವನೆ ಎದ್ದು ಕಾಣುವಂಥದ್ದೇ. ತಮ್ಮ ಪರ್ಯಾಯಾವಧಿಯಲ್ಲಿ ಹಲವು ಬಾರಿ ನಡೆಸಿದ ಕೋಟಿ ಅರ್ಚನೆ , ಲಕ್ಷಾರ್ಚನೆ, ಬಿಲ್ವಾರ್ಚನೆ, ಪುಷ್ಪಾರ್ಚನೆಗಳೇ ಶ್ರೀಪಾದರು ನವವಿಧ ಭಕ್ತಿಯಲ್ಲೊಂದಾದ 'ಅರ್ಚನೆ'ಗೆ ಮಹತ್ವ ನೀಡಿದ್ದಕ್ಕೆ ಉದಾಹರಣೆ.

ಎಂದಿಗೂ ಭಗವಂತನಿಗೆ ಬಾಗಿರುವುದೇ ವಂದನೆಯಲ್ಲವೆ. ಶ್ರೀಪಾದರಲ್ಲಿ ಇದೂ ಎದ್ದು ಕಾಣುವಂಥದ್ದೇ. ಪರ್ಯಾಯಾವಧಿಯಲ್ಲಿ ತಾವು ಮಾತ್ರ ಕೃಷ್ಣನಿಗೆ ಬಾಗಿದ್ದಲ್ಲದೆ ಉಳಿದವರನ್ನೂ ಬಗ್ಗಿಸಿದ್ದು ಶ್ರೀಪಾದರ ವೈಶಿಷ್ಟ್ಯ. ಯಾವತ್ತೂ ಶ್ರೀಕೃಷ್ಣಮಠದ ಕಡೆಗೆ ಮುಖವೂ ತೋರಿಸದ ಮಂದಿ ಶ್ರೀಪಾದರ ಪರ್ಯಾಯಾವಧಿಯಲ್ಲಿ ತಾವಾಗಿ ಬಂದು ಕೃಷ್ಣನಿಗೆ ಸೇವೆ ನೀಡಿದ್ದೇ ಇದಕ್ಕೆ ಸಾಕ್ಷಿ.

ನವವಿಧ ಭಕ್ತಿಯ ಮುಂದಿನ ಮಜಲು ದಾಸ್ಯ. ಇದು ಶ್ರೀಪಾದರಲ್ಲಿ ಸ್ವಾಭಾವಿಕವಾಗಿರುವ ಗುಣ. ಯಾವು ಏನು ಕಾರ್ಯ ನಡೆಸಿದರೂ ಎಲ್ಲವೂ ಗುರುಗಳ-ಹರಿವಾಯುಗಳ ಅನುಗ್ರಹದಿಂದ ನಡೆಯಿತೆಂದು ಭಾವುಕತೆಯಿಂದ ಶ್ರೀಪಾದರು ತಿಳಿಸುವಾಗ ಅವರಲ್ಲಿರುವ ದಾಸ್ಯಭಾವನೆ ಎದ್ದುಕಾಣುತ್ತದೆ. ಪೇಜಾವರ ಶ್ರೀಪಾದರೇ ಮೊದಲಾದ ಹಿರಿಯ ಯತಿಗಳಿಗೆ ಎಂದಿಗೂ ತಲೆಬಾಗಿಯೇ ಸಾಗುವ ಶ್ರೀಪಾದರ ದಾಸ್ಯ ಭಾವನೆಯೇ ಅವರ ಯಶಸ್ಸಿನ ರಹಸ್ಯ

ಎಂದರೆ ತಪ್ಪಾಗಲಾರದು.

ಶ್ರೀಪಾದರನ್ನು ಯಾರೇ ಭೇಟಿಯಾದರೂ ಆತ ಅನುಭವಿಸುವುದು ಮುಗುಳುನಗೆ, ಸೌಹಾರ್ದಯುತವಾದ ಮಾತುಕತೆ. ಎಂಥವನಿಗಾದರೂ ಈ ಎರಡರಿಂದ ಶ್ರೀಪಾದರಲ್ಲಿ ಭಕ್ತಿ, ಅಭಿಮಾನ ಮೂಡುವುದರಲ್ಲಿ ಸಂಶಯವೇ ಇಲ್ಲ. ಇದಕ್ಕೆ ಕಾರಣವೇ ಶ್ರೀಪಾದರಲ್ಲಿರುವ 'ಸಖ್ಯ' ಎಂಬ ಭಕ್ತಿಯ ಎಂಟನೆಯ ಮಜಲು. ಶ್ರೀಪಾದರಲ್ಲಿ ಇಲ್ಲಿಯವರೆಗೆ ಯಾರೂ ಎಂದಿಗೂ ಅಹಂಕಾರವನ್ನು ಕಂಡದ್ದಿಲ್ಲ. ಭಗವಂತನಲ್ಲಿ ಯಾವತ್ತೂ 'ಸಖ್ಯ' ಭಾವನೆಯನ್ನು ಬೆಳೆಸಿಕೊಂಡಿರುವ ಶ್ರೀಪಾದರು ತಮ್ಮ ಎಂತಹ ಸಮಸ್ಯೆಗಳಿದ್ದರೂ ತಲೆಕೆಡಿಸಿಕೊಳ್ಳದವರು. ಭಗವಂತ ಪರಿಹರಿಸುತ್ತಾನೆಂದು ನಿಶ್ಚಿಂತೆಯಿಂದಿರುವವರು.

ಭಕ್ತಿಯ ಕಡೆಯ ಮಜಲು ಆತ್ಮನಿವೇದನೆ. ಇದಕ್ಕೆ ಶ್ರೀಪಾದರೇ ಸಾಕ್ಷಿಯಾಗಬಲ್ಲವರು. ತಮ್ಮ ಪರ್ಯಾಯಾವಧಿಯಲ್ಲಿ ಅಂತಿಮಗಳಿಗೆಯವರೆಗೂ ಶ್ರೀಕೃಷ್ಣನಿಗೆ ವಿಧ ವಿಧ ಸೇವೆಯನ್ನರ್ಪಿಸುತ್ತಾ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಬಾಳಿರೋ' ಎಂಬ ದಾಸರ ಮಾತಿನಂತೆ ಶ್ರೀಕೃಷ್ಣ ಕೊಟ್ಟ ಎಲ್ಲ ಸಂಪತ್ತನ್ನೂ ಆತನಿಗೇ ಸಮರ್ಪಿಸಿ ತಾವು ಸಂತೋಷದಿಂದ ನಿರ್ಲಿಪ್ತರಾಗಿ ನಗುನಗುತ್ತಾ ಬರಿಗೈಯಲ್ಲಿ ಹೊರಬಂದ ಶ್ರೀಪಾದರ ಈ ಸರ್ವಸಮರ್ಪಣೆಯ ಮನೋಭಾವವನ್ನು ಕಂಡಾಗ ಅವರ ಎತ್ತರದ ಅರಿವಾದೀತು. ಅಂತಹ ಶ್ರೀಪಾದರಿಗೆ 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' ಎಂದಷ್ಟೇ ನಾವು ಹೇಳಬಲ್ಲೆವು.

ಹೀಗೆ ನವವಿಧ ಭಕ್ತಿಯನ್ನು ತಮ್ಮಲ್ಲಿ ಅಳವಡಿಸಿಕೊಂಡಿರುವ ಶ್ರೀಪಾದರ ಬಾಯಿಂದ ಹೊರಹೊಮ್ಮಿದ 'ನವವಿಧ ಭಕ್ತಿ'ಯ ಉಪನ್ಯಾಸ ಮಾಲಿಕೆಯ ಈ ಸಂಗ್ರಹ ನಮಗೂ ನವವಿಧ ಭಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸೋಣ.

ಅನಂತಕೃಷ್ಣಾಚಾರ್ಯ
ಸಂಗ್ರಾಹಕ

ನವವಿಧ ಭಕ್ತಿ

ಭಾಗವತ ಪುರಾಣ 18 ಪುರಾಣಗಳಲ್ಲಿ ಶ್ರೇಷ್ಠವಾದುದು. ಭಾಗವತದಲ್ಲಿಯೂ 7ನೇ ಸ್ಕಂಧ ತನ್ನದೇ ಆದ ಮಹತ್ವದಿಂಧ ಕೂಡಿದೆ. ಏಕೆಂದರೆ ಇಲ್ಲಿ ಒಬ್ಬ ಸಾಧಕನಿಗೆ ಬೇಕಾದ ಎಲ್ಲಅಧ್ಯಾತ್ಮ ರಹಸ್ಯಗಳೂ ಅಡಗಿಕೊಳ್ಳುತ್ತಿವೆ. ಅದತರಲ್ಲಿಯೂ ಪ್ರಹ್ಲಾದ ಚರಿತ್ರೆಯಲ್ಲಿ ಅಧ್ಯಾತ್ಮರಸಧಾರೆಯೇ ಹರಿದಿದೆ. ಇದನ್ನು ಭಾಗವತವೇ

ಧರ್ಮೋ ಭಾಗವತಾನಾಂ ಚ ಭಗವಾನ್ ಯೇನ ಗಮ್ಯತೇ ।

ಆಖ್ಯಾನೇಸ್ಮಿನ್ ಸಮಾಖ್ಯಾತಮಾಧ್ಯಾತ್ಮಿಕಮಶೇಷತ ಃ ॥

ಭಾಗವತ ಧರ್ಮ ಹಾಗೂ ಭಗವಂತ ಹೇಗೆ ದೊರೆಯುತ್ತಾನೆಂಬುದನ್ನು ಈ ಕಥೆಯಲ್ಲಿ ಸಂಪೂರ್ಣವಾಗಿ ತಿಳಿಸಲಾಗಿದೆ ಎಂದು ತಿಳಿಸಿದೆ.

ಪ್ರಹ್ಲಾದನ ಚರಿತ್ರೆಯಲ್ಲಿ ಬರುವ ನವವಿಧ ಭಕುತಿಯು ವಿವರಣೆಯಂತೂ ಅತ್ಯದ್ಭುತವಾದುದು.

ಪ್ರಹ್ಲಾದ ಹುಟ್ಟಿನಿಂದಲೇ ಮಹಾಭಾಗವತೋತ್ತಮ. ಗರ್ಭದಲ್ಲೇ ನಾರದರಿಂದ ದೀಕ್ಷೆ ಪಡೆದವ. ಬಾಲ್ಯದಲ್ಲಿಯೇ ಎಲ್ಲ ಮಕ್ಕಳು ತಾವು ಆಟವಾಡುತ್ತಿದ್ದರೆ ಪ್ರಹ್ಲಾದ ಭಗವಂತನನ್ನು ಆರಾಧಿಸುತ್ತಿದ್ದವ. ತಂದೆ ಹಿರಣ್ಯಕಶಿಪು ವಿದ್ಯಾಭ್ಯಾಸಕ್ಕಾಗಿ ಗುರುಗಳಾದ ಶಂಡಾ -ಮರ್ಕರ ಬಳಿ ಕಳುಹಿಸಿದ. ಭಗವದ್ವಿಷಯ ಹೊರತುಪಡಿಸಿ ಉಳಿದೆಲ್ಲವನ್ನೂ ಗುರುಗಳು ಬೋಧಿಸಿದರೂ ಪ್ರಹ್ಲಾದ ತಂದೆಯ ಬಳಿ ಬಂದು ಭಗವಂತನ ಬಗ್ಗೆಯೇ ತಿಳಿಸಿದ್ದು. ಹಿರಣ್ಯಕಶಿಪು ಮತ್ತೆ ಗುರುಗಳ ಬಳಿ ಕಳುಹಿಸಿದ. ಗುರುಗಳು ಇನ್ನಷ್ಟು ಮುತುವರ್ಜಿಯಿಂದ ಭಗವದ್ವಿಷಯವನ್ನು ಹೊರತುಪಡಿಸಿ ಉಳಿದೆಲ್ಲವನ್ನು ಬೋಧಿಸಿ ಹಿರಣ್ಯಕಶಿಪುವಿನ ಬಳಿಗೆ ಕರೆದುಕೊಂಡು

ಬಂದರು. ಹಿರಣ್ಯಕಶಿಪುವಿಗೆ ಬಹಳ ಸಂತೋಷ. ತನ್ನ ಮಗನಲ್ಲಿ ಈಗ ತಿದ್ದುಪಡಿ ಆಗಿದೆ ಎಂಬುದು ಆತನ ಆಸೆ. ಧರ್ಮಾರ್ಥಕಾಮಗಳ ಬಗ್ಗೆ ಚೆನ್ನಾಗಿ ಕಲಿತಿರುತ್ತಾನೆ ಎಂಬ ಆಸೆಯಿಂದ ಮಗನನ್ನು ಬಳಿಗೆ ಕರೆದು ತೊಡೆಯ ಮೇಲೆ ಕೂಡಿಸಿಕೊಂಡ. ತನ್ನ ಉದರದಿಂದ ಬಂದ ಕೂಸೆಂದು ತೊಡೆಕೊಟ್ಟ. ಪ್ರಹ್ಲಾದ ತನಗೆ ಬೇಕಾದಂತಿರುತ್ತಾನೆಂದು ಪ್ರೀತಿಯ ಪರಾಕಾಷ್ಠೆ ತೋರಿದ. ದೈತ್ಯರ ಸ್ವಭಾವವೇ ಹಾಗೆ, ಯಾವ ಕ್ಷಣದಲ್ಲಿ ಪ್ರಸನ್ನರಾಗಿರುತ್ತಾರೆ, ಯಾವ ಕ್ಷಣದಲ್ಲಿ ಕೋಪಗೊಳ್ಳುತ್ತಾರೆಂದು ತಿಳಿಯುವುದೇ ಕಷ್ಟ. ಆದ್ದರಿಂದಲೇ ದೈತ್ಯರಿಂದ ಯಾವತ್ತೂ ದೂರವಿರಬೇಕು.

ಹಿರಣ್ಯಕಶಿಪು ತಲೆಯನ್ನು ಮೂಸಿದ. ಇದೊಂದು ಪ್ರೀತಿಯ ಸಂಕೇತ. ಸುಂದರವಾದ, ತೀಕ್ಷ್ಣಮತಿಯುಳ್ಳ ಮಗ ತನಗಿದ್ದಾನೆಂದು ಬಹಳ ಪ್ರೀತಿ ಉಕ್ಕಿದೆ. ಅದರಿಂದ ಆನಂದಭಾಷ್ಪ ಸುರಿಸಿದನಂತೆ. ಅರಳಿದ ಮುಖವುಳ್ಳವನಾಗಿ ಮಗನನ್ನು ಪ್ರಶ್ನಿಸಿದ - **ಪ್ರಹ್ಲಾದಾನೂಚ್ಯತಾಂ ತಾತ ಸ್ವಧೀತಂ ಕಿಂಚಿದುತ್ತಮಮ್।** . ನಿನ್ನ ಗುರುಗಳು ಕಲಿಸಿಕೊಟ್ಟದ್ದರಲ್ಲಿ ಶ್ರೇಷ್ಠವಾದುದನ್ನು ಹೇಳು ಎಂದು. ಇಲ್ಲಿ ಅನುಚ್ಯತಾಂ ಎಂದು ಹೇಳುತ್ತಾನೆ. ಅಂದರೆ ಹಿರಣ್ಯಕಶಿಪುವಿಗೆ ಒಳಗಿನಿಂದ ಭಯವಿದೆ. ಮಗ ಹಿಂದಿನ ಸಂಸ್ಕಾರದಿಂದ ಭಗವಂತನ ಬಗ್ಗೆ ತಿಳಿಸುತ್ತಾನೋ ಎಂದು. ಆದ್ದರಿಂದ ಗುರುಗಳು ಹೇಳಿಕೊಟ್ಟದ್ದನ್ನು ಅನುಸರಿಸಿ 'ಉಚ್ಯತಾಂ' ಹೇಳು ಎಂದು ಹೇಳುತ್ತಿದ್ದಾನೆ.

ಪ್ರಹ್ಲಾದ ಬಹಳ ಸಂತೋಷದಿಂದ ಉತ್ತರಿಸಿದ. ಅದು ಕೇವಲ ಹಿರಣ್ಯಕಶಿಪುವಿನ ಪ್ರಶ್ನೆಗೆ ಉತ್ತರವಲ್ಲ, ಪ್ರತಿಯೊಬ್ಬ ಸಾಧಕನೂ ಚಿಂತಿಸಬೇಕಾದ ವಿಷಯ. ಸಾಧಕನ ಸಾಧನೆಗೆ ಅವಶ್ಯವಾಗಿ ಬೇಕಾದ

ಒಂಬತ್ತು ಭಕ್ತಿಯ ಮೆಟ್ಟಿಲುಗಳು. ಹಿರಣ್ಯಕಶಿಪು ನೀನು ಕಲಿತಿದ್ದರಲ್ಲಿ ಶ್ರೇಷ್ಠವಾದುದನ್ನು ಹೇಳು ಎಂದು ಪ್ರಶ್ನಿಸಿದ್ದ. ಅದಕ್ಕೆ ಉತ್ತರವಾಗಿ ಪ್ರಹ್ಲಾದ ಅಧ್ಯಯನ ಮಾಡಿದ್ದರಲ್ಲಿ ಉತ್ತಮವಾದುದೆಂದರೆ ಒಂಬತ್ತು ಲಕ್ಷಣಗಳನ್ನೊಳಗೊಂಡ ಭಕ್ತಿ ಎಂದು ತಿಳಿಸಿದ. ಇದು ಎಲ್ಲ ಸಾಧಕರು ತಿಳಿದುಕೊಳ್ಳಬೇಕಾದ ಅಂಶ.

ಭಗವಂತನ ಸಾಕ್ಷಾತ್ಕಾರ ಆಗಬೇಕಾದರೆ ದೇವರಲ್ಲಿ ಭಕ್ತಿ ಮಾಡಲೇಬೇಕು. ಆ ಭಕ್ತಿ ಹೇಗೆ ಬರುವುದೆಂದು ಪ್ರಶ್ನೆಮೂಡಿದರೆ ಅದಕ್ಕೆ ಒಂಬತ್ತು ಮೆಟ್ಟಿಲುಗಳನ್ನು ಏರಿಹೋಗಬೇಕೆಂದು ಪ್ರಹ್ಲಾದ ತಿಳಿಸುತ್ತಾನೆ. ಅಂದರೆ ಒಂಬತ್ತು ತರಹದ ಭಕ್ತಿಯಲ್ಲ, ಒಂಬತ್ತು ಸೇರಿದಾಗ ಭಕ್ತಿ. ಭಕ್ತಿಯನ್ನು ಯಾರಲ್ಲೂ ಹುಟ್ಟಿಸಲು ಸಾಧ್ಯವಿಲ್ಲ. ವ್ಯಕ್ತಿಯ ಒಳಗೆ ಅವ್ಯಕ್ತವಾಗಿ ಬೂದಿಮುಚ್ಚಿದ ಕೆಂಡದಂತಿದ್ದರೆ ಅದನ್ನು ಅಭಿವ್ಯಕ್ತಗೊಳಿಸಬಹುದಷ್ಟೆ.

ಒಂಬತ್ತು ಸೋಪಾನಗಳಾವುವೆಂದರೆ -

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನವ್ ।
ಅರ್ಚನಂ ವಂದನಂ ದಾಸ್ಯಂ ಸಖಂ ಆತ್ಮನಿವೇದನವ್ ॥

ಶ್ರವಣ :

ಭಕ್ತಿ ಮೂಡಲು ಒಂಬತ್ತು ಮೆಟ್ಟಿಲುಗಳನ್ನೇರಬೇಕು. ಅದರಲ್ಲಿ ಮೊದಲ ಮೆಟ್ಟಿಲು ಶ್ರವಣ, ಅಂದರೆ ಕೇಳುವುದು. ನಮ್ಮಲ್ಲಿ ಹಲವರು ಹೇಳುವುದುಂಟು. "ನಾನು ದೇವರ ಪೂಜೆ ಮಾಡಿದೆ, ಸೇವೆ ಮಾಡಿದೆ, ವ್ರತಾಚರಣೆ ಮಾಡಿದೆ. ಆದರೂ ದೇವರು ನನಗೆ ಕಾಣಲೇ ಇಲ್ಲ." ಎಂದು. ದೇವರು ನಮ್ಮ ಮುಂದೆಯೇ ಇದ್ದಾನೆ. ಆದರೆ ನಾವು ಆತನನ್ನು

ನೋಡುತ್ತಿಲ್ಲ. ಏಕೆಂದರೆ ನಮಗೆ ಹೊರಗಿನ ಕಣ್ಣು ತೆರೆದಿದೆಯೇ ಹೊರತು ಒಳಗಿನ ಜ್ಞಾನದ ಕಣ್ಣಲ್ಲ. ಆ ಜ್ಞಾನದೃಷ್ಟಿ ತೆರೆಯಬೇಕಾದರೆ ಮುಖ್ಯವಾಗಿ ಬೇಕಾದ ಮೊದಲ ಮೆಟ್ಟಿಲು ಶ್ರವಣ ಅಥವಾ ಕೇಳುವುದು. ನಾವು ಭಗವಂತನ ಮಹಿಮೆಗಳನ್ನು ನಿರಂತರವಾಗಿ ಕೇಳುತ್ತಿರಬೇಕು. ಕೆಲವರು ಕೆಲವು ಗ್ರಂಥಗಳ ಶ್ರವಣ ಮಾಡಿ "ನಾನು ಎಲ್ಲವನ್ನೂ ಕೇಳಿಯಾಯಿತು. ಇನ್ನೇನು ಕೇಳಲು ಬಾಕಿ ಇದೆ?" ಎಂದು ಪ್ರಶ್ನಿಸುವುದುಂಟು. ಇದು ಮೂರ್ಖತನದ ಹೇಳಿಕೆ. ಏಕೆಂದರೆ ಭಗವಂತನ ಬಗ್ಗೆ ಎಷ್ಟು ಕೇಳಿದರೂ ಕಡಿಮೆಯೇ. ಸಾಗರವನ್ನು ನೋಡಲು ಹೋದವ ಕಂಡದ್ದು ಒಂದು ಭಾಗವನ್ನು ಮಾತ್ರ. ಆದರೆ ಆತ ಎಣಿಸಿದ್ದು ನಾನು ಸಂಪೂರ್ಣ ಸಾಗರವನ್ನು ಕಂಡೆ ಎಂದು. ಇಲ್ಲಿಯೂ ಹಾಗೆಯೇ. ಭಗವಂತನ ಮಹಿಮೆಯ ಸಾಗರದಲ್ಲಿ ಎಲ್ಲೋ ಒಂದು ಬಿಂದುವನ್ನು ಹೆಕ್ಕುವವರು ನಾವು. ಭಗವಂತನ ಬಗ್ಗೆ ಕೇಳಿ ಮುಗಿಸಲು ಸಾಧ್ಯವಿಲ್ಲ. ಆದ್ದರಿಂದ 'ಶ್ರವಣ' ನಿರಂತರ ಮಾಡಬೇಕಾದದ್ದು. ಈ ಕೇಳುವಿಕೆಯೂ ಪೂರ್ಣವಾಗಿರಬೇಕು. ಅಂದರೆ ನಾವು ಎಲ್ಲಿಯಾದರೂ ಉಪನ್ಯಾಸ ನಡೆಯುತ್ತಿದ್ದರೆ ಬಂದು ಕೂಡುತ್ತೇವೆ. ಆದರೆ ಅಲ್ಲಿ ಒಂದು ಗಂಟೆ ಉಪನ್ಯಾಸ ನಡೆದರೆ ನಾವು ಕೇಳುವುದು ಮುಕ್ಕಾಲು ಗಂಟೆ ಮಾತ್ರ. ಉಳಿದ ಕಾಲು ಗಂಟೆ ಅತ್ತಿತ್ತ ನೋಡುತ್ತ ಕಳೆಯುತ್ತೇವೆ. ಹಾಗಾಗದೆ ಸಂಪೂರ್ಣವಾಗಿ ಮನಸ್ಸನ್ನು ಶ್ರವಣದಲ್ಲಿ ತೊಡಗಿಸಬೇಕು. ಈ ಮನಸ್ಸಾದರೋ ನಾವು ಹೇಗೆ ಆಹಾರ ಕೊಡುತ್ತೇವೋ ಹಾಗೆ ಸ್ಪಂದಿಸುತ್ತದೆ. ಭಗವಂತನಲ್ಲಿ ಭಕ್ತಿ ಬರಬೇಕಾದರೆ ಮನಸ್ಸನ್ನು ಭಗವಂತನೆಡೆಗೆ ಹರಿಸಬೇಕು. ಆದರೆ ನಮ್ಮ ಮನಸ್ಸು ಹರಿಯುತ್ತಿರುವುದು ಭವದ ಕಡೆಗೆ. ಅದಕ್ಕೆ ಕಾರಣ ನಮ್ಮ ಚಿಂತನೆ. ನಾವು ದಿನದಲ್ಲಿ ಸುಮಾರು 23ಗಂಟೆಗಳ ಕಾಲ ಚಿಂತಿಸುವುದು ಈ ಪ್ರಪಂಚವನ್ನು. ಭಗವಂತನ ಬಗ್ಗೆ

ಚಿಂತಿಸುವುದು ಕೇವಲ ಒಂದೆರಡು ಗಂಟೆಗಳ ಕಾಲ. ಈಗ ನಾವೇ ಆಲೋಚಿಸೋಣ. 23ಗಂಟೆಗಳ ಚಿಂತನೆ ನಮ್ಮ ಮೇಲೆ ಪರಿಣಾಮಕಾರಿಯೋ, ಒಂದೆರಡು ಗಂಟೆಗಳ ಚಿಂತನೆ ಪರಿಣಾಮಕಾರಿಯೋ ಎಂದು. ಈ 23ಗಂಟೆಗಳ ಚಿಂತನೆಗೂ ಕಾರಣ ಕಣ್ಣಿನಿಂದ ನೋಡುವುದು. ನಾವು ಯಾವುದನ್ನು ಈ ಪ್ರಪಂಚದಲ್ಲಿ ನೋಡುತ್ತೇವೋ ಅದನ್ನೇ ಚಿಂತಿಸುತ್ತಿರುತ್ತೇವೆ. ಈ ಪ್ರಪಂಚದಲ್ಲಿ ಹೆಚ್ಚಾಗಿ ಕಾಣುವುದೇ ಕೆಟ್ಟ ದೃಶ್ಯಗಳು. ಆದ್ದರಿಂದ ಮನಸ್ಸಿನಲ್ಲಿ ಮೂಡುವ ಚಿಂತನೆಯೂ ದುಷ್ಟವಾದದ್ದೇ ಆಗಿರುತ್ತದೆ. ಇದಕ್ಕೆ ಪ್ರಾಯಶ್ಚಿತ್ತವೇ 'ಶ್ರವಣ' ಅಂದರೆ ಕಣ್ಣಿನಿಂದ ಕಂಡದ್ದನ್ನು ಕಿವಿಯಿಂದ ಕೇಳಿ ಮರೆಯಬೇಕು. ಈ ಕಣ್ಣು-ಕಿವಿಗಳ ಸಂಬಂಧ ವಿಚಿತ್ರವಾದದ್ದು. ಭಗವಂತ ಈ ದೇಹದಲ್ಲಿ ಕಣ್ಣು ಹಾಗೂ ಕಿವಿಗಳನ್ನು ಒಟ್ಟಿಗೆ ಇಟ್ಟಿದ್ದಾನೆ. ಲಕ್ಷಣ ಭರಿತವಾದ ಕಣ್ಣು ತಾನು ಕಿವಿಯವರೆಗೂ ಹಬ್ಬಿರುತ್ತದಂತೆ.

ನಾವು ಕಣ್ಣಿನಿಂದ ಕೆಟ್ಟ ದೃಶ್ಯಗಳನ್ನು ಕಂಡು ಮನಸ್ಸನ್ನು ಕೆಡಿಸಿಕೊಂಡೆವು. ಆಗ ಕಿವಿ (ಶ್ರವಣ) 'ನೀನು ನೋಡಿದ್ದು ತಪ್ಪು. ಇನ್ನು ಹೀಗೆ ಮಾಡಬೇಡ' ಎಂದು ತಿದ್ದುತ್ತದೆ. ಆಗ ಕಣ್ಣು ತಾನು ಸ್ಪಂದಿಸಿದರೆ ಮರುದಿನ ಕೆಟ್ಟದ್ದನ್ನು ನೋಡುವುದನ್ನು ಕಡಿಮೆ ಮಾಡುತ್ತದೆ. ಮತ್ತಷ್ಟು ಶ್ರವಣಕ್ಕನುಗುಣವಾಗಿ ಕಣ್ಣು ತಾನು ಇನ್ನಷ್ಟು ಕೆಟ್ಟ ದೃಶ್ಯಗಳಿಂದ ದೂರವಾಗುತ್ತದೆ. ಆಗ ಮನಸ್ಸು ಶುದ್ಧವಾಗುತ್ತದೆ. ಅದರಿಂದ ಭಗವಂತನ ಚಿಂತನೆ ಸಾಧ್ಯವಾಗುತ್ತದೆ. ಅದಕ್ಕಾಗಿ ನಿರಂತರ ಶ್ರವಣ ಮಾಡುತ್ತಿರಬೇಕು.

ಉಪನಿಷತ್ತು 'ನಿನಗೆ ದೇವರನ್ನು ಕಾಣಬೇಕೆಂಬ ಅಪೇಕ್ಷೆ ಇದ್ದರೆ, ದೇವರಲ್ಲಿ ಪ್ರೇಮ ಪ್ರವಾಹ ಹರಿಯಬೇಕೆಂದಿದ್ದರೆ ಮೊದಲು ತೂತನ್ನು

ಮುಚ್ಚು' ಎಂದು ತಿಳಿಸಿತು. ಅದನ್ನೇ ಭಾಗವತಕಾರರು 'ಅಹೋಬಿಲೇ' ಅಂದರೆ ದೊಡ್ಡ ಗುಹೆ ಎಂದು ವರ್ಣಿಸಿದರು. ಈ ಗುಹೆಯಲ್ಲಿ ಋಷಿಮುನಿಗಳು ವಾಸಿಸಬೇಕೇ ಹೊರತು ಸಿಂಹ, ಹುಲಿಗಳಂಥ ಕ್ರೂರಪ್ರಾಣಿಗಳಲ್ಲ. ಅಂದರೆ ಋಷಿಮುನಿಗಳ ಉಪದೇಶಾತ್ಮಕವಾದ ಶಬ್ದ ಪ್ರವೇಶಿಸಬೇಕೇ ಹೊರತು ಸಿಂಹ-ಹುಲಿಗಳಂಥ ಶಬ್ದ ಪ್ರವೇಶಿಸಬಾರದು. ಅದಕ್ಕಾಗಿ ನಿರಂತರ ಶ್ರವಣ ಮಾಡುತ್ತಿರಬೇಕು.

ಈ ಶ್ರವಣಕ್ಕೆ ಎಂತಹ ಶಕ್ತಿ ಇದೆ ಎಂದರೆ ಕಲ್ಲು ಬಂಡೆಯನ್ನು ಕರಗಿಸುತ್ತದಂತೆ. ಯಾವ ಕಲ್ಲು ಬಂಡೆ? ಈ ಮನಸ್ಸೇ ಕಲ್ಲು ಬಂಡೆಯಂತಿರುವುದು. ಒಂದು ಕಲ್ಲು ಬಂಡೆಯ ಮೇಲೆ ನಿರಂತರವಾಗಿ ನೀರು ಬೀಳುತ್ತಿದ್ದರೆ ಅದು ಕರಗುತ್ತದೆ. ಇದು ನಮ್ಮೆಲ್ಲರ ಅನುಭವ. ಹಾಗೆಯೇ ನಿರಂತರ ಶ್ರವಣವೆಂಬ ನೀರಿನ ಹನಿಗಳಂತೆ ಒರಟಾದ, ಗಟ್ಟಿಯಾದ ಮನಸ್ಸು ಕರಗಿ ನೀರಾಗುತ್ತದಂತೆ. ಅದೇ ಭಕ್ತಿಯ ಜಲಧಾರೆಯಾಯಿತು. ಅದನ್ನೇ ಭಗವಂತನಿಗೆ ಅಭಿಷೇಕ ಮಾಡಿದರೆ ಭಗವಂತ ಪ್ರಸನ್ನನಾಗಿ ತನ್ನ ದರ್ಶನವೀಯುತ್ತಾನೆ. ಇದು ಶ್ರವಣದಿಂದಾಗುವ ಕಾರ್ಯ. ಈ ಮನಸ್ಸಾದರೋ ಮತ್ತ್ಯಾವುದರಿಂದಲೂ ತಾನು ಖಂಡಿತವಾಗಿಯೂ ಕರಗುವುದಿಲ್ಲ. ಕೇವಲ ಶಾಸ್ತ್ರದ ನಿರಂತರ ಜಲಧಾರೆಗೆ ಮಾತ್ರ ಕರಗುವುದು.

ಈ ಮನಸ್ಸು ಅತ್ಯಂತ ಚಂಚಲವಾದದ್ದು. ನಮ್ಮನ್ನು ಕದಲಿಸಿಬಿಡುವಂಥದ್ದು. ಮಹಾ ಬಲಿಷ್ಠವಾದದ್ದು. ಇದನ್ನೇ ಅರ್ಜುನ 'ಚಂಚಲಂ ಹಿ ಮನಃ ಕೃಷ್ಣ ಪ್ರಮಾಥೀ ಬಲವದ್ದೃಢಮ್' ಎಂದು ಗೀತೆಯಲ್ಲಿ ಪ್ರಶ್ನಿಸುವುದು. ಇಂತಹ ಚಂಚಲವಾದ ಮನಸ್ಸು ಭಗವಂತನಲ್ಲಿ ಸ್ಥಿರವಾಗಿ ನಿಲ್ಲಿಸುವುದು ಹೇಗೆ? ಎಂಬುದು ನಮ್ಮೆಲ್ಲರ

ಪ್ರಶ್ನೆ. ಅದಕ್ಕೆ ಕೃಷ್ಣ 'ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ' ಎಂದು ಉತ್ತರಿಸಿದ್ದಾನೆ. ಚಂಚಲವಾದ ಮನಸ್ಸು ದೃಢವಾಗಬೇಕಾದರೆ ಅಭ್ಯಾಸ ಬೇಕು. ಅಂದರೆ 'ಅಭಿತಃ ಆಸ' ಎಂಬಂತೆ ಶಾಸ್ತ್ರದ ಶ್ರವಣ ನಿರಂತರ ಆಗಬೇಕು. ಒಳ್ಳೆಯ, ಭಗವಂತನ ಗುಣಗಳನ್ನು ಪ್ರತಿಪಾದಿಸುವ ಶಬ್ದಗಳನ್ನು ಕೇಳುತ್ತಾ ಇದ್ದರೆ ವ್ಯಕ್ತಿ ಅದೇ ಗುಂಗಿನಲ್ಲಿರುತ್ತಾನೆ. ಹಾಗೆಯೇ ಲೌಕಿಕವಾದ ಹರಟೆಯ ಮಾತುಗಳನ್ನು ಕೇಳುತ್ತಿದ್ದರೆ ಮನಸ್ಸಿನಲ್ಲಿ ಅದೇ ತಿರುಗುತ್ತಿರುತ್ತದೆ. ಆದ್ದರಿಂದ ನಮ್ಮ ಮನಸ್ಸು ನಿರಂತರವಾಗಿ ಭಗವಂತನನ್ನು ಚಿಂತಿಸಬೇಕಾದರೆ ನಿರಂತರವಾದ ಶ್ರವಣ ಬೇಕು.

ಸಾಧನೆ ಮಾಡಬೇಕೆಂದು ಯಾರಾದರೂ ಬಯಸಿದರೆ ಆತ ಮೊದಲು ಮಾಡಬೇಕಾದದ್ದು 'ಶ್ರವಣ'. ನಾವು ದುಃಖದಿಂದ ದೂರಾಗಿ ಆನಂದವನ್ನು ಪಡೆಯಬೇಕಾದರೆ ಅವಶ್ಯವಾಗಿ ಈ ಶ್ರವಣವೆಂಬ ಭಕ್ತಿಯ ಮೊದಲ ಮೆಟ್ಟಿಲು ಬೇಕು.

ಕೀರ್ತನಂ :

ಭಗವಂತನ ನಾಮಕೀರ್ತನೆ ಭಕ್ತಿಯ ಪಥದಲ್ಲಿ ಎರಡನೆಯ ಮೆಟ್ಟಿಲು. ನಮ್ಮಲ್ಲಿ ಈಗಿನ ವೈದ್ಯರನ್ನು ಕರೆಯುವಾಗ E&T ಸ್ಪೆಶಲಿಸ್ಟ್ ಎಂದು ಕರೆಯುವುದುಂಟು. ಅಂದರೆ ಕಿವಿಗೂ ಗಂಟಲಿಗೂ ಬಹಳ ಸಂಬಂಧವಿದೆಯೆಂದು ಇದರಿಂದ ತಿಳಿಯುತ್ತದೆ. ಮೊದಲು ಕಿವಿ ಕೇಳಿತು. ನಂತರದ ಕಾರ್ಯ ಕಂಠಕ್ಕೆ. ಕಿವಿಯಿಂದ ಕೇಳಿದ್ದನ್ನು ಗಂಟಲಿನ ವಾಯುವಿನ ಮೂಲಕ ನಿರಂತರ ಹೇಳುವುದು. ಅದೇ ಕೀರ್ತನ. ನಮಗೂ ಇದರ ಅಭ್ಯಾಸ ಇಲ್ಲವೆಂದಲ್ಲ. ನಾವು ಕಂಡವರ ಕೀರ್ತನೆ ಮಾಡುತ್ತಲೇ ಇರುತ್ತೇವೆ. ಆದರೆ ವಾಸ್ತವವಾಗಿ ಇವೆಲ್ಲವೂ ಅಪಕೀರ್ತನ. ಕೇವಲ

ಭಗವಂತನನ್ನು ಗಟ್ಟಿಯಾಗಿ ಹಾಡಿ ಹೊಗಳುವುದೇ ಕೀರ್ತನವೆಂದು ಕರೆಸಲ್ಪಡುತ್ತದೆ. ಯಾವತ್ತೂ ಕೆಟ್ಟ ವಿಷಯವನ್ನು ಗಂಟಲಿನಲ್ಲೇ ಇರಿಸಿಕೊಳ್ಳಬೇಕು ಅಥವಾ ನುಂಗಬೇಕು. ಆದರೆ ಎಂದೂ ಹೊರಗೆ ಖಾರಬಾರದು. ಕೇವಲ ಭಗವಂತನ ಗುಣಗಾನವನ್ನು ಮಾತ್ರ ಗಟ್ಟಿಯಾಗಿ ಮಾಡಬೇಕು.

ನಮ್ಮಲ್ಲಿ ಕೆಲವರು ದೇವರಕೋಣೆಯಲ್ಲಿ ಮಾತ್ರ ಕೀರ್ತನ ಮಾಡುವವರು. ಏಕೆಂದರೆ ಅವರಿಗೆ ಹೊರಗೆ ಮಾಡಲು ನಾಚಿಕೆ. ಕೆಲವರಿಗೆ ಹೊರಗೆ ದೊಡ್ಡ ಸಭೆಯಲ್ಲಿ ಕೀರ್ತನೆ ಹಾಡುವುದೆಂದರೆ ಬಲು ಇಷ್ಟ. ಏಕೆಂದರೆ ಅವರು ಪ್ರಚಾರಪ್ರಿಯರು. ಅವರಿಗೆ ಭಗವಂತ ಮುಖ್ಯವಲ್ಲ. ಕೀರ್ತಿ ಮುಖ್ಯ. ವಸ್ತುತಃ ಈ ಎರಡೂ ತಪ್ಪು. ನಾವು ಭಗವಂತನ ಕುರಿತಾದ ಕೀರ್ತನೆಯನ್ನು ಗಟ್ಟಿಯಾಗಿ ಹೇಳಬೇಕು. ಭಗವಂತನ ಪ್ರೀತಿಗಾಗಿ ಹೇಳಬೇಕು. ಅದರಲ್ಲಿ ಯಾವುದೇ ರೀತಿಯ ನಾಚಿಕೆಗೆ ಅವಕಾಶವಿಲ್ಲ. ಅದು ಪ್ರಚಾರ ಮಾಧ್ಯಮವೂ ಅಲ್ಲ. ಭಾಗವತದಲ್ಲಿ ಪ್ರಹ್ಲಾದನೇ ಮೊದಲಾದ ಅನೇಕ ಭಾಗವತೋತ್ತಮರು ಈ ರೀತಿ ಗಟ್ಟಿಯಾಗಿ ಕೀರ್ತನ ಮಾಡುತ್ತಾ ಕುಣಿದಾಡುವುದನ್ನು ಕಾಣಬಹುದು.

ವಿಶೇಷವಾಗಿ ಕಲಿಯುಗದಲ್ಲಿ ಕೀರ್ತನೆಗೆ ಬಹಳ ಮಹತ್ವವಿದೆ. ಭಾಗವತ ಇದನ್ನು "**ಕೃಷ್ಣವರ್ಣಂ ಕಲೌ ಕೃಷ್ಣಂ ಸಾಂಗೋಪಾಂಗಂ ಸಪಾರ್ಷದಮ್ । ಯಜ್ಞೈಃ ಸಂಕೀರ್ತನ ಪ್ರಾಯೈಃ ಯಜಂತಿಸ್ಮ ಸುಮೇಧಸಃ ॥**" ಎಂದು ಹೇಳುವ ಮೂಲಕ 'ಕೀರ್ತನ' ಒಂದು ಯಜ್ಞವೆಂದು ಪರಿಗಣಿಸಿದೆ. 'ಯಜ್ಞ' ಎಂದರೆ ಕೇವಲ ಹವಿಸ್ಸನ್ನು ಅಗ್ನಿಗೆ ಹಾಕುವುದೆಂದರ್ಥವಲ್ಲ. ತನ್ನಲ್ಲಿದ್ದುದ್ದನ್ನು ತನ್ನದಲ್ಲ

ಭಗವಂತನದ್ದೆಂಬ ಅಹಂಕಾರ-ಮಮಕಾರಗಳ ಪರಿತ್ಯಾಗವೇ ಯಜ್ಞದ ರಹಸ್ಯ. ಕೀರ್ತನೆಯೂ ಹೀಗೆಯೇ. ಈ ಶರೀರ ನನ್ನದಲ್ಲ ಎಂಬ ಭಾವನೆಯಿಂದ ನಾನು ಮಾಡುವ ಎಲ್ಲ ಶಬ್ದೋಚ್ಚಾರಣೆಗಳೂ ನೀನೇ ನನ್ನಿಂದ ಮಾಡಿಸಿದ್ದೆಂಬ ಅನುಸಂಧಾನದಿಂದ ಇಡಿಯ ಶರೀರವನ್ನು ಆತನಿಗರ್ಪಿಸುವುದು. ಉಪನಿಷತ್ತಿದಲ್ಲಿ ಕೀರ್ತನೆಗೆ ಬಹಳ ಮಹತ್ವ ಕೊಡಲ್ಪಟ್ಟಿದೆ. 'ತದ್ಧಿತಪಃ ತದ್ಧಿತಪಃ' ಎಂದು ಭಗವಂತನನ್ನು ಕುರಿತು ಕೀರ್ತನೆ ಮಾಡುವುದೇ ದೊಡ್ಡ ತಪಸ್ಸೆಂದು ಹೇಳಲ್ಪಟ್ಟಿದೆ.

ಭಗವಂತ ನಮ್ಮ ಬಗ್ಗೆ ಸಂತುಷ್ಟನಾಗಬೇಕಾದರೆ ಈ ಕೀರ್ತನೆ ಬಹಳ ಮುಖ್ಯ. ಉದಾಹರಣೆಗೆ ಒಂದು ಮಗು ತನ್ನ ತಂದೆ-ತಾಯಂದಿರನ್ನು "ಅಪ್ಪ","ಅಮ್ಮ"ಎಂದು ಕರೆದರೆ ಅವರಿಗೆ ಬಹಳ ಸಂತೋಷವಾಗುವುದಿಲ್ಲವೆ? ಹಾಗೆಯೇ ಭಗವಂತನನ್ನು ನಾವು ಕೀರ್ತನೆ ಮಾಡಿದರೆ ಆತ ಸಂತುಷ್ಟನಾಗುತ್ತಾನೆ. ನಮ್ಮೊಳಗಿರುವ ಪ್ರೀತಿಯನ್ನು ಅಭಿವ್ಯಕ್ತಗೊಳಿಸಲು ಇರುವ ಮಾಧ್ಯಮವೇ ಈ ಕೀರ್ತನ. ಆದ್ದರಿಂದ ಎಷ್ಟೆಷ್ಟು ಭಕ್ತಿ ಇರುತ್ತದೆಯೋ ಅಷ್ಟು ಕಂಠ ತುಂಬಿ ಶಬ್ದಗಳು ಹೊರಬರುತ್ತವೆ. ಆಚಾರ್ಯ ಮಧ್ವರು ಶ್ರವಣ, ಕೀರ್ತನಗಳಿಗೆ ಬಹಳ ಒತ್ತು ಕೊಟ್ಟಿದ್ದಾರೆ. ಈ ಎರಡನ್ನು ಎಂದಿಗೂ ಬಿಡಬಾರದೆಂದು ತಿಳಿಸಿದ್ದಾರೆ. ಮೊದಲು ಶ್ರವಣ ಮಾಡಬೇಕು. ನಂತರ ನಮ್ಮನ್ನು ನಾವೇ ತಿದ್ದಿಕೊಳ್ಳಬೇಕು. ಅದು ಹೇಗೆಂದರೆ ಕೀರ್ತನದ ಮೂಲಕ. ನಾವು ಇನ್ನೊಬ್ಬರಿಗೆ ತಿಳಿಸಬೇಕಾದರೆ ಮೊದಲು ನನ್ನನ್ನು ನಾನು ತಿದ್ದಿಕೊಳ್ಳಬೇಕು. ಆಗ ಮಾತ್ರ ನಾವು ಮಾಡುವುದು ಕೀರ್ತನವಾಗುತ್ತದೆ.

ನಾವು ಶ್ರವಣ ಮಾಡುವುದು ಇನ್ನೊಬ್ಬರಿಗೆ ಹೇಳಲಿಕ್ಕಾಗಿ

ಎಂಬುದನ್ನು ಮರೆಯಬಾರದು. ಇನ್ನೊಬ್ಬರಿಗೆ ಹೇಳಬೇಕಾದರೆ ಶ್ರವಣ, ಕೀರ್ತನದೊಡನೆ ಇನ್ನೊಂದು ಬೇಕು. ಅದೇ ಸ್ಮರಣ. ಮೊದಲು ಕೇಳಬೇಕು. ಹೇಳಬೇಕು. ಹೇಳಿದ್ದನ್ನು ನೆನಪಿಟ್ಟು- ಕೊಳ್ಳಬೇಕು.

ಸ್ಮರಣ :

ಯಾವತ್ತೂ ಯಾವುದನ್ನು ಇಲ್ಲಿಯವರೆಗೆ ಕಂಡಿದ್ದೇವೋ ಅದನ್ನು ಮಾತ್ರ ಸ್ಮರಿಸಲು ಸಾಧ್ಯ. ಕಾಣದ್ದನ್ನು ಸ್ಮರಿಸುವುದು ಸಾಧ್ಯವಿಲ್ಲ. ಆದ್ದರಿಂದಲೇ ಸ್ಮರಣೆ ಭಕ್ತಿಯ ಅಂಗಗಳಲ್ಲಿ ಸೇರಿದೆ. ಶ್ರವಣ, ಕೀರ್ತನೆಗಳಿಂದ ಕಂಡುಕೊಂಡದ್ದನ್ನು ಸ್ಮರಿಸಬೇಕು. ಪ್ರಧಾನವಾಗಿ ಮನಸ್ಸಿನ ಕೆಲಸವಿದು. ಈ ಸ್ಮರಣೆ ಎಂಬುದು ಒಂದು ಅಗ್ನಿ. ಈ ಅಗ್ನಿ ಅಗತ್ಯವಾಗಿ ಬೆಳೆಯಬೇಕಾದದ್ದು. ಮನಸ್ಸಿನಲ್ಲಿರುವ ಕಶ್ಮಲಗಳನ್ನು ಸುಟ್ಟುಹಾಕಲು ಇರುವ ಏಕೈಕ ಸಾಧನ ಈ ಸ್ಮರಣ. ಮುಂದೆ ಭಗವಂತನ ಪೂಜೆ. ಅದು ಮೂರು ಬಗೆಯಿಂದ. ಪಾದಸೇವನೆ, ಅರ್ಚನೆ, ವಂದನೆಗಳ ಮೂಲಕ. ಒಂದೊಂದರ ಬಗ್ಗೆಯೂ ಗಮನ- ಹರಿಸಬೇಕಾದದ್ದು. ಮೊದಲು ಪಾದಸೇವನ.

ಪಾದಸೇವನೆ :

ಭಗವಂತನ ಬಗ್ಗೆ ಕೇಳಿದೆವು, ಕೇಳಿದ್ದನ್ನು ಹೇಳಿದೆವು. ಹೇಳಿದ್ದನ್ನು ನೆನಪಿಸಿಕೊಂಡೆವು. ಹೀಗೆ ಸದಾ ನೆನಪಿಸಿಕೊಳ್ಳುತ್ತಿದ್ದರೆ ಭಗವಂತ ನಮ್ಮ ಬಳಿ ಬರುತ್ತಾನೆ. ಅಲ್ಲಿಯವರೆಗೆ ನಮ್ಮ ಪಾಲಿಗೆ ಎಲ್ಲಿಯೋ ಇದ್ದ ಭಗವಂತ ನಿರಂತರ ಸ್ಮರಣೆಯಿಂದಾಗಿ ಹತ್ತಿರದವನಾದ. ಅಂದರೆ ಆತನ ಇರುವಿಕೆಯ ಅರಿವಾಯಿತು. ಆ ಭಗವಂತನಿಗೆ ನಾವು ಮಾಡುವುದೇನು? ಎಂಬ ಪ್ರಶ್ನೆ ಮನಸ್ಸಿನಲ್ಲಿ ಕಾಡಿದರೆ ಪ್ರಹ್ಲಾದ

ತಿಳಿಸಿದ 'ಪಾದಸೇವನಂ' ಎಂದು. ನಿನ್ನ ಬಳಿ ಬಂದ ಭಗವಂತನ ಪಾದವನ್ನು ಹಿಡಿ. ಆತನನ್ನು ಪಾದದಿಂದ ಶಿರದವರೆಗೆ ಪೂಜಿಸು. ಇಲ್ಲಿ ಪಾದವೆಂದರೆ 'ಕಾಲು' ಎಂದರ್ಥವಲ್ಲ. ಹಿರಿಯರ ಸ್ವರೂಪವನ್ನು ಪಾದ ಶಬ್ದದಿಂದ ಶಾಸ್ತ್ರಗಳು ತಿಳಿಸುವುದುಂಟು. ಹಾಗೆಯೇ ಪಾದಸೇವನೆಯೆಂದರೆ ಇಡೀ ಭಗವಂತನ ಸ್ವರೂಪ ಚಿಂತನೆ. ನಾವು ಈ ಸಂಸಾರ ಸಾಗರವನ್ನು ದಾಟಿ ಭಗವಂತನ ಪಾದವನ್ನು ಹಿಡಿ. ಆತನನ್ನು ಪಾದದಿಂದ ಶಿರದ ವರೆಗೆ ಪೂಜಿಸು. ಇಲ್ಲಿ ಪಾದವೆಂದರೆ ಕೇವಲ ಕಾಲು ಎಂದರ್ಥವಲ್ಲ. ಹಿರಿಯರ ಸ್ವರೂಪವನ್ನು ಪಾದ ಶಬ್ದದಿಂದ ಶಾಸ್ತ್ರಗಳು ತಿಳಿಸುವುದುಂಟು. ಹಾಗೆಯೇ ಪಾದಸೇವನೆಯೆಂದರೆ ಇಡೀ ಭಗವಂತನ ಸ್ವರೂಪ ಚಿಂತನೆ. ನಾವು ಈ ಸಂಸಾರ ಸಾಗರವನ್ನು ದಾಟಿ ಭಗವಂತನ ಲೋಕವನ್ನು ಹೊಂದಲು ದೋಣಿಯಂತಿರುವುದೇ ಭಗವಂತನ ಪಾದವೆಂದು ಜ್ಞಾನಿಗಳ ಅಭಿಪ್ರಾಯ. ಅಂತಹ ಪಾದವನ್ನು ಗಟ್ಟಿಯಾಗಿ ಹಿಡಿಯಬೇಕು. ಭಗವಂತ ನಮ್ಮ ಮನಮಂದಿರಕೆ ಎಷ್ಟು ವೇಗವಾಗಿ ಬಂದನೋ ಅಷ್ಟೇ ವೇಗವಾಗಿ ಕಣ್ಮರೆಯಾಗುವ ಸಂಭವವೂ ಇದೆ. ಆದ್ದರಿಂದ ಎಂದೆಂದಿಗೂ ನನ್ನೊಳಗಿಂದ ಹೋಗದಂತೆ ಮಾಡಲುಭಗವಂತನ ಪಾದವನ್ನು ಗಟ್ಟಿಯಾಗಿ ಹಿಡಿಯಬೇಕು. ನಮ್ಮ ಅರ್ಚನೆಗಳಲ್ಲಿ ಭಗವಂತನಿರುವುದೇ ಇಲ್ಲ. ಆತ ದೂರ ಹೋಗಿರುತ್ತಾನೆ. ಆದ್ದರಿಂದ ಭಗವಂತನ ಪಾದವನ್ನು ಗಟ್ಟಿಯಾಗಿ ಹಿಡಿದು ನಿಲ್ಲಿಸಿ ನಂತರ ಅರ್ಚನೆ ಮಾಡಬೇಕು. ಅರ್ಚನೆಯ ಬಳಿಕ ಭಗವಂತ ನಮ್ಮನ್ನು ಬಿಟ್ಟಗಲದಂತೆ ಮತ್ತೆ ವಂದನಾರ್ಪಣೆ. ನನ್ನಲ್ಲೇ ನೆಲೆಸುವಂತೆ ಪ್ರಾರ್ಥನೆ. ವಂದನೆಯ ಬಳಿಕ 'ಸಖ್ಯ'. ಭಗವಂತ ನಮ್ಮ ಸ್ತೋತ್ರಕ್ಕೆ ಮೆಚ್ಚಿ ನಮ್ಮಲ್ಲಿ

ನೆಲೆ ನಿಂತ. ಆಗ 'ದ್ವಾ ಸುಪರ್ಣಾ ಸಯುಜಾ ಸಖಾಯಾ' ಎಂಬ ಶೃತಿಯಂತೆ ಭಗವಂತ ನಮ್ಮ ಆತ್ಮೀಯನಾಗಿ ಕಾಣುತ್ತಾನೆ. ಅಲ್ಲಿಯವರೆಗೆ ಅವಿಜ್ಞಾತನಾಗಿದ್ದವ ಆಗ ವಿಜ್ಞಾತನಾಗುತ್ತಾನೆ. ನಮ್ಮ ಪ್ರತಿ ಕ್ಷಣಗಳ ಆಗುಹೋಗುಗಳ ಬಗ್ಗೆ ಕಾಳಜಿ ವಹಿಸುತ್ತಾನೆ. ಆಗ ಸಾಧಕನಿಗೆ ಭಗವಂತ ನನ್ನ ಸ್ವಾಮಿ ನಾನು ಆತನ ದಾಸನೆಂಬ ಭಾವನೆ ಸುದೃಢವಾಗುತ್ತದೆ. ಆತ ದಾಸ್ಯವನ್ನು ಒಪ್ಪಿಕೊಳ್ಳುತ್ತಾನೆ. ತನ್ನೊಳಗಿದ್ದ ಅಹಂಕಾರವನ್ನು ಸಂಪೂರ್ಣವಾಗಿ ಕಿತ್ತೊಗೆಯುತ್ತಾನೆ. ಯಾವಾಗ ದಾಸ್ಯವನ್ನು ಅಂಗೀಕರಿಸಿದನೋ ಆಗ ಒಳಗಿನಿಂದ ಚಡಪಡಿಕೆ ಪ್ರಾರಂಭವಾಯಿತು. ಹೇ ನನ್ನ ಸ್ವಾಮಿ, ಭಗವಂತ ನನ್ನನ್ನು ಪ್ರತಿ ಕ್ಷಣದಲ್ಲಿಯೂ ರಕ್ಷಿಸುತ್ತಿರುವ ನಿನಗೆ ನಾನೇನು ಕೊಡಲಿ ಎಂದು.

ಆತ್ಮನಿವೇದನ :

ಕಡೆಗೆ ಮನಃಪೂರ್ವಕವಾಗಿ ಬಲಿಚಕ್ರವರ್ತಿಯಂತೆ ತನ್ನನ್ನೇ ತಾನು ಭಗವಂತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾನೆ. ಇದೇ 'ಆತ್ಮನಿವೇದನ'. ಮತ್ತೇನು ಉಳಿಯುವುದಿಲ್ಲ.

ಯಾವಾಗ ಸಾಧಕನಿಗೆ 'ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮಚಾಖಿಲಮ್' ಎಂಬ ಭಾವನೆ ಸ್ಥಿರವಾಗಿ ಒಳಗೆ ಉಳಿಯುತ್ತದೆ. ಆಗ 'ಆತ್ಮನಿವೇದನ' ಅಂದರೆ ಆತ್ಮೀಯವಾದ ಶರೀರ, ಮನೆ, ಆಸ್ತಿ, ಹೆಂಡತಿ-ಮಕ್ಕಳನ್ನೆಲ್ಲಾ ಭಗವಂತನಿಗೆ ಸಮರ್ಪಿಸಿದ. ಆಗ 'ಆತ್ಮನಿವೇದನ' ಅಂದರೆ ಭಗವಂತ ನಮ್ಮಲ್ಲಿ ಸ್ಥಿರವಾಗಿ ನಿಲ್ಲುತ್ತಾನೆ. ತನ್ನ ಮನೆಗೆ (ಮೋಕ್ಷಕ್ಕೆ) ಕರೆಸಿಕೊಳ್ಳುತ್ತಾನೆ. ಹೀಗೆ ಪ್ರಹ್ಲಾದ ಭಗವಂತನನ್ನು ಸೇರಲು ಬೇಕಾದ ಒಂಬತ್ತು ಮೆಟ್ಟಿಲುಗಳುಳ್ಳ ಭಕ್ತಿಮಾರ್ಗವನ್ನು ವಿವರಿಸುತ್ತಾನೆ.

ಅನುಸಂಧಾನ

ಶ್ರವಣ, ಕೀರ್ತನ ಮುಂತಾದ ಒಂಬತ್ತು ಭಕ್ತಿಯ ಮಜಲುಗಳನ್ನು ಕಂಡೆವು. ಈ ಪ್ರತಿಯೊಂದನ್ನು ನಡೆಸುವಾಗ ಅನುಸಂಧಾನ ಹೇಗಿರಬೇಕು ಎಂಬುದನ್ನು ಪ್ರಹ್ಲಾದ 'ವಿಷ್ಣೋಃ ಕೀರ್ತನಂ' ಎಂದು ತಿಳಿಸುತ್ತಾನೆ. ಅಂದರೆ ನಮ್ಮೊಳಗೆ ಭಗವಂತನಿದ್ದು ಕೇಳಿಸುತ್ತಾನೆ. ಅಧ್ಯಾಪಕರೊಳಗೆ ಭಗವಂತ ಇದ್ದು ಹೇಳಿಸುತ್ತಾನೆ. ಕೀರ್ತನೆ- ಯಲ್ಲಿಯೂ 'ವಿಷ್ಣೋಃ ಕೀರ್ತನಂ' ಎಂಬ ಅನುಸಂಧಾನ ಬೇಕು. ಅಂದರೆ ನನ್ನೊಳಗಿದ್ದು ಭಗವಂತ ಹೇಳುವುದು. ಆತ ಹೇಳಿದರೆ ನಾನು ಹೇಳುತ್ತೇನೆ (ಆತ ಬಿಂಬ ನಾನು ಪ್ರತಿಬಿಂಬ) ಎಂಬ ಅನುಸಂಧಾನ ಬೇಕು. ಈ ವಿಷಯದಲ್ಲಿ ಮಹಾಭಾರತ ಕಥೆಯೊಂದು ನೆನಪಾಗುತ್ತದೆ. ಶರಶಯ್ಯೆಯಲ್ಲಿ ಮಲಗಿದ ಭೀಷ್ಮರ ಬಳಿ ಕೃಷ್ಣ ಧರ್ಮರಾಜಾದಿಗಳನ್ನು ಕರೆದುಕೊಂಡು ಬಂದು ಭೀಷ್ಮರಿಗೆ ಉಪದೇಶಿಸಲು ಆದೇಶಿಸಿದ. ಆಗ ಭೀಷ್ಮರು **'ಕಾ ಶಕ್ತಿರ್ಮಮ ದೇವೇಶ ಪಾರ್ಥಾನುಬೋಧಯಿತುಂ ಪ್ರಭೋ'** ಎಂದು ಸಂಶಯಪಟ್ಟಾಗ ಕೃಷ್ಣ ತಾನೇ ಭೀಷ್ಮರ ಒಳಗೆ ನಿಂತು ಉಪದೇಶಿಸುತ್ತೇನೆಂದು ಭೀಷ್ಮರಿಗೆ ಧೈರ್ಯತುಂಬಿ ಉಪದೇಶಿಸಿದ. ಇದು ಪ್ರತಿಯೊಬ್ಬ ಉಪದೇಶಕರಿಗೂ-ಉಪನ್ಯಾಸಕಾರರಿಗೂ ಇರಬೇಕಾದ ಅನುಸಂಧಾನ. ಇದು ಎಲ್ಲರ ಅನುಭವವೂ ಹೌದು. ನಾವು ಒಮ್ಮೆ ಉಪನ್ಯಾಸ ಮಾಡುತ್ತೇವೆ. ಮತ್ತೆ ಎರಡು ದಿನ ಕಳೆದು ಅದ ಬಗ್ಗೆ ಕೇಳಿದರೆ ನೆನಪಿರುವುದಿಲ್ಲ. ಭಗವಂತ ನಮ್ಮೊಳಗಿದ್ದು ನುಡಿಸುತ್ತನೆಂಬುದಕ್ಕೆ ಇದೇ ಸಾಕ್ಷಿಯಲ್ಲವೇ?

ಮುಂದೆ ಸ್ಮರಣವೂ 'ವಿಷ್ಣೋಃ ಸ್ಮರಣಂ'. ಸ್ಮರಣೆ ಆಗಬೇಕಾದರೆ

ಪ್ರಭೋಧಕನಾದ ಭಗವಂತ ನಮ್ಮಲ್ಲಿ ನೆಲೆನಿಲ್ಲಬೇಕು. ಸ್ಮರಣೆಯಲ್ಲಿ ಭಗವಂತನ ಪಾತ್ರ ಬಹಳ ಮುಖ್ಯವಾದದ್ದು. ಮನಸ್ಸಿನಲ್ಲಿ ಭಗವಂತ ಕುಳಿತು ಪ್ರೇರಣೆ ಮಾಡಿದಾಗಲಷ್ಟೇ ನಮಗೆ ಸ್ಮರಣೆ ಸಾಧ್ಯವಾದೀತು.

ಮುಂದೆ 'ಪಾದಸೇವನೆ'ಯೂ ವಿಷ್ಣೋಃ ಪಾದಸೇವನಂ ಎಂದೇ ಅರ್ಥ. ಅಂದರೆ ವಿಷ್ಣುವಿನ ಪಾದ ಸೇವನೆ ಎಂದರ್ಥ. ಪಾದ ಎಂದರೆ ಅಂಶ ಎಂದರ್ಥ. ಭಗವಂತನ ಪಾದಗಳು ಎಂದರೆ ಅಂಶಗಳೆಂದರ್ಥ. ಭಗವಂತನದ್ದು ನಾಲ್ಕು ಅಂಶಗಳು. **'ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ'** ಎಂಬಂತೆ ಶ್ವೇತದ್ವೀಪ, ಅನಂತಾಸನ, ವೈಕುಂಠದಲ್ಲಿ ಭಗವಂತನ ಮೂರು ಪಾದಗಳು. ಅಂದರೆ ಮೂರು ಅಂಶ (ರೂಪ)ಗಳು. ನಾಲ್ಕನೆಯ ಪಾದ ಎಲ್ಲೆಡೆ ವ್ಯಾಪಿಸಿದೆ. ಹೀಗೆ ಎಲ್ಲೆಡೆ ತುಂಬಿರುವ ಭಗವಂತನ ಅದ್ಭುತ ಸಾಮರ್ಥ್ಯವನ್ನು ಚಿಂತನೆ ಮಾಡಲು ಇರುವ ಮಾಧ್ಯಮವೇ ಈ ಪಾದಸೇವನ. ಅದನ್ನೇ 'ವಿಷ್ಣೋಃ ಪಾದಸೇವನಂ' ಎಂದು ಪ್ರಹ್ಲಾದ ತಿಳಿಸಿದ. ಅಂದರೆ ಎಲ್ಲೆಡೆ ತುಂಬಿರುವ ವಿಷ್ಣುವಿನ ರೂಪಗಳನ್ನು ಒಂದೊಂದು ಭೂತಗಳಲ್ಲೂ ಚಿಂತಿಸಬೇಕೆಂದರ್ಥ. ಹೀಗೆ ಎಲ್ಲೆಡೆ ತುಂಬಿರುವ ಭಗವಂತನ ರೂಪಗಳನ್ನು ಯಾವಾಗ ಯಥಾಶಕ್ತಿ ಚಿಂತಿಸಲಾರಂಭಿಸುತ್ತೇವೋ ಆಗ ಪಾದದಿಂದ ಅರ್ಚನೆ ಪ್ರಾರಂಭ. ಅದೇ ಮುಂದಿನ ಹೆಜ್ಜೆ. ಈ ಅರ್ಚನೆಯೂ 'ವಿಷ್ಣೋಃ ಅರ್ಚನಂ' ಅಂದರೆ ಭಗವಂತನೆ ಮಾಡುವ ಪೂಜೆ. ಇದನ್ನು ವೇದ ಸ್ಪಷ್ಟವಾಗಿ 'ನಿಷುಸೀದ ಗಣಪತೇ' ಎಂಬ ಮಂತ್ರದಲ್ಲಿ ವಿವರಿಸುತ್ತದೆ. ಭಗವಂತ ತನ್ನ ಪೂಜೆ ತಾನೇ ಮಾಡಿ ನಮಗೆ ಫಲವನ್ನೂ ನೀಡುತ್ತಾನಂತೆ.

ನಂತರದ್ದು 'ವಂದನ'. ಇದೂ 'ವಿಷ್ಣೋಃ ವಂದನಂ' ಎಂದೇ ಅರ್ಥ. ಅಂದರೆ ಭಗವಂತನೇ ಮಾಡುವ ನಮಸ್ಕಾರವೆಂದರ್ಥ. ನಾವು ನಮಸ್ಕರಿಸಿದೆವೆಂಬ ಅಹಂಕಾರಕ್ಕೆ ಅವಕಾಶವಿಲ್ಲ. ಏಕೆಂದರೆ ನಾವು ನಮಸ್ಕರಿಸಬೇಕಾದರೆ ಒಂದೊಂದು ಅವಯುವಗಳೂ ಬಗ್ಗಬೇಕಲ್ಲವೆ. ಅದನ್ನು ಒಳಗಿನಿಂದ ಬಗ್ಗಿಸುವವನೂ ಭಗವಂತನೇ. ನಮಸ್ಕರಿಸು-ವವನೂ ಆತನೇ. ಆದ್ದರಿಂದ 'ವಂದನ'ವೆಂಬುದು ಭಗವಂತನಿಗೆ ಸೇರಿದ್ದು. ವಂದನೆಗೆ ಮುಖ್ಯವಾಗಿ ಬೇಕಾದದ್ದು ಮನಸ್ಸು. ಇದರ ಬಗ್ಗೆ ಟೀಕಾಕೃತ್ಪಾದರು ವಿವರಿಸುತ್ತಾ **"ಮನೋವೃತ್ತೇಃ ಪ್ರವಣತಾ ಹಿ ವಂದನಮ್"** ಎಂದು ವಿವರಿಸುತ್ತಾರೆ. ಈ ಮನಸ್ಸಿನ ಪ್ರಾವಣ್ಯ ಭಗವಂತ ಇಚ್ಛಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಆದ್ದರಿಂದ ವಂದನವೂ ಭಗವದಧೀನವೇ.

ಮುಂದಿನ ಮಜಲು 'ದಾಸ್ಯ'. 'ಇದೂ ವಿಷ್ಣೋಃ ದಾಸ್ಯಂ' ಎಂದೇ ಅರ್ಥ. ದಾಸನೆಂದರೆ ಭಗವಂತ ನಮಗೆ ತಿಳಿಸಿರುವ ವಿಧಿ-ನಿಷೇಧಗಳನ್ನು ತಪ್ಪದೆ ಪಾಲಿಸುವುದೆಂದರ್ಥ. ಶ್ರುತಿ-ಸ್ಮೃತಿಗಳೇ ಭಗವಂತನ ಆಜ್ಞೆಗಳು. ಅದನ್ನು ಮೀರದೇ ಪಾಲಿಸುವುದೇ ದಾಸ್ಯ. ಅಲ್ಲಿ ಯಾವುದೇ ಪ್ರಶ್ನೆಗೆ, ಆಕ್ಷೇಪಕ್ಕೆ ಅವಕಾಶವಿಲ್ಲ. ಹೇಗೆ ಒಬ್ಬ ಕೂಲಿಯುವ ಒಡೆಯ ಏನು ಹೇಳಿದರೂ ಪ್ರಶ್ನಿಸದೆ ತಾನು ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಹೋಗುತ್ತಾನೋ ಆತ ದಾಸ. ಇಂತಹ ದಾಸ್ಯವೂ ಭಗವಂತನಿಗೆ ಸೇರಿದ್ದು. ಏಕೆಂದರೆ ಆಚಾರ್ಯರು ತಿಳಿಸುವಂತೆ 'ನ ಹಿ ಪ್ರತಿಬಿಂಬೇ ಕ್ರಿಯಾ ಅಸ್ತಿ' - ಬಿಂಬದಲ್ಲಿ ಕ್ರಿಯೆ ಆಗದೆ ಪ್ರತಿಬಿಂಬದಲ್ಲಿ ಕ್ರಿಯೆ ಇಲ್ಲ. ಆದ್ದರಿಂದ ನಮ್ಮ ದಾಸ್ಯವೆಂದರೆ ಭಗವಂತನ ದಾಸ್ಯವೆಂದೇ

ಅರ್ಥ. ನಾವು ಭಗವಂತನ ದಾಸರಾದರೆ ಆತನೂ ನಮ್ಮ ದಾಸನಾಗುತ್ತನಂತೆ. ರಾಮಾಯಣದಲ್ಲಿ ಯಾರು ರಾಮನ ದಾಸರಾಗಿ ಸೇವೆ ಸಲ್ಲಿಸಿದರೋ ಅವರೆಲ್ಲರಿಗೂ ಭಗವಂತ ಮಹಾಭಾರತದಲ್ಲಿ ಕೃಷ್ಣನ ರೂಪದಲ್ಲಿ ದಾಸನಾಗಿ ಅನುಗ್ರಹಿಸಿದ. 'ತಂ ಯಥಾ ಯಥಾ ಉಪಾಸತೇ ತದೇವ ಭವತಿ' ಎಂಬಂತೆ ನಾವು ಆತನನ್ನು ಹೇಗೆ ಉಪಾಸನೆ ಮಾಡುತ್ತೇವೋ ಹಾಗೆಯೇ ಆತ ಅನುಗ್ರಹಿಸುತ್ತಾನಂತೆ. ಆದ್ದರಿಂದ ದಾಸ್ಯದ ಚಿಂತನೆ ಬಹಳ ಮುಖ್ಯವಾದದ್ದು. ನಾವು ಆತನ ದಾಸನಾಗಿ ಹೂವ ತಂದರೆ ಆ ಭಗವಂತ ನಮ್ಮ ದಾಸನಾಗಿ ಹುಲ್ಲ ತರುತ್ತಾನಂತೆ. ಭಗವಂತ ಕೃಷ್ಣನಾಗಿ ಅರ್ಜುನನ ಗಾಡಿ ಓಡಿಸಿದ, ಕುದುರೆಗಳನ್ನು ತೊಳೆದ, ದೂತನಾದ. ಜಗತ್ತಿನ ಸ್ವಾಮಿ ಹೀಗೇಕೆ ಮಾಡುತ್ತಾನೆಂದರೆ ಅದೇ ದಾಸ್ಯದ ಮಹಿಮೆ. ಪಾಂಡವರು ತಮ್ಮನ್ನು ಕೃಷ್ಣನ ದಾಸರೆಂದು ತಿಳಿದರು. ಅದರಿಂದ ಕೃಷ್ಣ ಅವರ ದಾಸನಾದ. ಒಟ್ಟಾರೆ ದಾಸ್ಯದ ಚಿಂತನೆಯನ್ನು ಹೇಳುವುದಾದರೆ 'ಇಟ್ಹಾಂಗೆ ಇರುವೆನೋ ಹರಿಯೇ' ಎಂಬ ಅನುಸಂಧಾನದಿಂದ ಬದುಕುವುದೆಂದೇ ಅರ್ಥ.

ಮುಂದಿನ ಮೆಟ್ಟಿಲು 'ಸಖ್ಯ'. ಇಲ್ಲಿಯೂ 'ವಿಷ್ಣೋಃ ಸಖ್ಯಂ' ಎಂಬುದನ್ನು ಮರೆಯುವಂತಿಲ್ಲ. ಸಂಸ್ಕೃತದಲ್ಲಿ 'ಸಖ' ಎಂದರೆ ಅವಕಾಶದಿಂದ ಕೂಡಿದವನೆಂದರ್ಥ. (ಖಂ ಎಂದರೆ ಆಕಾಶ. ಅದರಿಂದ ಸಹಿತನಾದವ ಸಖ.) ನಾವು ಕಷ್ಟದಲ್ಲಿರುವಾಗ ನಮಗೆ ಸಲಹೆಗಳನ್ನಿತ್ತು ಕಷ್ಟದಿಂದ ಪಾರು ಮಾಡುವವ ಸಖನೆಂದರ್ಥ. ಅದಕ್ಕೆ ಮುಖ್ಯವಾಗಿ ಬೇಕಾದದ್ದು ಮನೋವೈಶಾಲ್ಯ. ಅದೂ ಭಗವಂತನಿಗೇ ಸೇರಿದ್ದು. ಆತನೇ ನಮ್ಮ ನಿಜವಾದ ಸಖ. ಇದು ವೇದ-ಪುರಾಣಗಳಲ್ಲಿ

ಪ್ರಸಿದ್ಧವಾದದ್ದು. ಭಗವಂತ ನಮ್ಮೊಡನೆ ಇದ್ದು ನಮಗೆ ಯಾವಾವ ಕಾಲದಲ್ಲಿ ಏನೇನು ಬೇಕೋ ಅದೆಲ್ಲವನ್ನೂ ಒದಗಿಸುತ್ತಿದ್ದಾನೆ. ಭಗವಂತನೇ ನಮ್ಮ ನಿಜವಾದ ಸಖ ಎನ್ನುವುದಕ್ಕೆ ನಮ್ಮ ಅನುಭವವೇ ಸಾಕ್ಷಿ. ನಾವು ಪ್ರತಿದಿನ ನಮ್ಮ ಚಟುವಟಿಕೆಗಳನ್ನು ಮರೆತು ಬದುಕುತ್ತಿದ್ದರೂ ಭಗವಂತ ನಮ್ಮ ಸಖನಾಗಿ ನಮ್ಮಿಂದ ತಪ್ಪದೇ ಮಾಡಿಸುತ್ತಿರುತ್ತಾನೆ. ಉದಾ.: ನಾವು ಉಸಿರಾಡುತ್ತಿದ್ದೇವೆಂದೇ ನಾವು ಮರೆತಿರುತ್ತೇವೆ. ಹಾಗಿದ್ದರೂ ಉಸಿರಾಟ ನಿಲ್ಲುತ್ತದೆಯೇ. ಭಗವಂತ ನಮ್ಮಿಂದ ನಿರಂತರವಾಗಿ ಮಾಡಿಸುತ್ತಿರುತ್ತಾನಷ್ಟೇ? ಇದೇ ಸಖನಾಗಿರುವುದಕ್ಕೆ ಉದಾಹರಣೆ. ಈ ರೀತಿ ಚಿಂತಿಸುತ್ತಾ ಹೋದರೆ ಭಗವಂತ ನಮ್ಮ ಸಖನಾಗಿ ನಮಗೆ ಎಷ್ಟು ಸಹಾಯ ಮಾಡುತ್ತಿದ್ದಾನೆಂದು ತಿಳಿಯುತ್ತದೆ. ಲೋಕದಲ್ಲಿ ನಮಗೆ ಗೆಳೆಯರಿದ್ದರೂ ಅವರು ಒಂದು ದಿನ ಕೈಬಿಡುವವರೇ. ಆದರೆ ನಮ್ಮ ನಿಜವಾದ ಸಖನಾದ ಭಗವಂತ ಎಂದೆಂದಿಗೂ ನಮ್ಮ ಕೈಬಿಡುವವನಲ್ಲ. ಇದನ್ನು ನಾವು ಎಂದಿಗೂ ನೆನಪಿಟ್ಟುಕೊಳ್ಳಬೇಕಾದದ್ದು. ಅರ್ಜುನ ಇದನ್ನು ಚೆನ್ನಾಗಿ ಬಲ್ಲವನಾಗಿದ್ದ. ಆದ್ದರಿಂದಲೇ ಯುದ್ಧಕ್ಕಿಂತ ಮುಂಚೆ ಕೃಷ್ಣನ ಬಳಿ ನಿರಾಯುಧನಾಗಿದ್ದರೂ ಸರಿಯೇ ನೀನೇ ನನಗೆ ಬೇಕೆಂದು ಬೇಡಿದ್ದ. ಈ ಕಾರಣದಿಂದಲೇ ಇಡಿಯ ಮಹಾಭಾರತ ಯುದ್ಧದಲ್ಲಿ ಕೃಷ್ಣ ಅರ್ಜುನನ ಸಖನಾಗಿ ಆತನಿಗೆ ಜಯವನ್ನು ತಂದು ಕೊಟ್ಟ. ಆದ್ದರಿಂದ ಸಖ್ಯ ಎಂಬುವುದು ನಮಗಿಂತಲೂ ಹೆಚ್ಚಾಗಿ ಭಗವಂತನಲ್ಲಿಯೇ ಸರಿಹೊಂದುತ್ತದೆ.

ಅಂತಿಮ ಮಜಲು 'ಆತ್ಮನಿವೇದನ'. ಇದನ್ನೂ 'ವಿಷ್ಣೋಃ ಆತ್ಮನಿವೇದನಂ' ಎಂದೇ ತಿಳಿಯಬೇಕು. ನಾವು ನಮ್ಮನ್ನು ಭಗವಂತನಿಗೆ ಸಮರ್ಪಿಸಿಕೊಳ್ಳುತ್ತೇವೆಂದರೆ ಅದು ಭಗವಂತ ತನ್ನನ್ನು ನಮಗೆ

ಸಮರ್ಪಿಸಿದನೆಂದೇ ಅರ್ಥ. ನಾವು ಎಷ್ಟೆಷ್ಟು ನಮ್ಮನ್ನು ಭಗವಂತನಿಗೆ ಅರ್ಪಿಸಿಕೊಳ್ಳುತ್ತೇವೋ ಭಗವಂತ ಅಷ್ಟಷ್ಟು ತನ್ನನ್ನು ನಮಗೆ ಅರ್ಪಿಸಿಕೊಳ್ಳುತ್ತಾನೆ. ಅಂಬರೀಷ ಮಹಾರಾಜ ತನ್ನ ಸರ್ವಸ್ವವನ್ನು ಭಗವಂತನಿಗೆ ಅರ್ಪಿಸಿದ್ದ. ಆದ್ದರಿಂದ ಭಗವಂತ ತನ್ನನ್ನೇ ಆತನಿಗೆ ಅರ್ಪಿಸಿಕೊಂಡಿದ್ದ. ಅದರ ಸಂಕೇತವಾಗಿ ತನ್ನ ಸುದರ್ಶನ ಚಕ್ರವನ್ನೇ ಆತನ ರಕ್ಷಣೆಗೆ ಕೊಟ್ಟಿದ್ದ.

ಹೀಗೆ ಭಕ್ತಿಯ ಒಂದೊಂದು ಮಜಲುಗಳನ್ನು ಏರುವಾಗಲೂ ಇದು ವಿಷ್ಣುವಿಗೇ ಸೇರಿದ್ದೆಂಬ ಅನುಸಂಧಾನ ಮುಖ್ಯವಾದದ್ದು.

ನವವಿಧ ಭಕ್ತರು

ನವವಿಧ ಭಕ್ತಿಗನುಗುಣವಾಗಿ ನವವಿಧ ಭಕ್ತರು. ವಸ್ತುತಃ ಭಕ್ತರಿಗೆ ಎಲ್ಲವೂ ಮುಖ್ಯವಾದದ್ದೇ. ಆದರೆ ಒಬ್ಬೊಬ್ಬರಲ್ಲಿ ಒಂದೊಂದು ಅಧಿಕವಾಗಿರುವುದನ್ನು ಕಾಣಬಹುದು.

ಶ್ರವಣ :

ನಿರಂತರ ಕೇಳುವುದರಿಂದ ಭಗವಂತನ ಸಾಕ್ಷಾತ್ಕಾರ ಸಾಧ್ಯ ಎನ್ನುವುದಕ್ಕೆ ಸಾಕ್ಷಿಯೇ ಪರೀಕ್ಷಿತ ರಾಜ. ತಾನು ಏಳು ದಿನಗಳ ಕಾಲ ಆಹಾರ-ನೀರು ತೊರೆದು ಶ್ರವಣ ಮಾಡಿದ. ಇದಲ್ಲದೆ ರಾಮಾಯಣದ ಸಂಪಾತಿಯ ಕಥೆಯೂ ಶ್ರವಣಕ್ಕೆ ಉದಾಹರಣೆಯಾಗಿದೆ. ರಾಮಾಯಣ ಕಥಾ ಶ್ರವಣದಿಂದ ಸಂಪಾತಿ ಕಳೆದುಕೊಂಡಿದ್ದ ರೆಕ್ಕೆಯನ್ನು ಮರಳಿಪಡೆದ.

ಕೀರ್ತನೆ :

ಭಗವಂತನನ್ನು ಕೊನೆಯ ಉಸಿರಿರುವವರೆಗೂ ಹೊಗಳಿ ಪ್ರಾಣತ್ಯಾಗ

ಮಾಡಿದ ಭೀಷ್ಮಾಚಾರ್ಯರು ಕೀರ್ತನೆಯಿಂದ ಭಗವಂತನ ಸಾಕ್ಷಾತ್ಕಾರ ಸಾಧ್ಯವೆಂಬುದಕ್ಕೆ ಉದಾಹರಣೆ. ಶುಕಾಚಾರ್ಯರೂ ಭಾಗವತ ಕಥಾ ಕೀರ್ತನೆಯಿಂದಲೇ ಭಗವಂತನನ್ನು ಒಲಿಸಿಕೊಂಡವರು. ಹೀಗೆ ಭೀಷ್ಮ-ಶುಕಾಚಾರ್ಯರು ಕೀರ್ತನೆಗೆ ಉದಾಹರಣೆಯಾಗಿ ನಿಲ್ಲುತ್ತಾರೆ.

ಸ್ಮರಣ :

ಭಗವಂತನ್ನು ಚಿಂತಿಸುವುದು ಸ್ಮರಣೆಯಲ್ಲವೆ. ಅಂದರೆ ಖಂಡಸ್ಮೃತಿ ಸ್ಮರಣೆ. ಅದೇ ನಿರಂತರವಾದಾಗ ಧ್ಯಾನ (ಅಖಂಡಸ್ಮೃತಿ). ಇದಕ್ಕೆ ಉದಾಹರಣೆ ಧ್ರುವ ಅಥವಾ ಪ್ರಹ್ಲಾದ.

ಪಾದಸೇವನೆ :

ಪಾದಸೇವನೆಗೆ ಉದಾಹರಣೆಯಾಗಿರುವವನೇ ಹನುಮಂತ ದೇವರು. ಹನುಮಂತ ಇರುವುದು ಸಿಂಹಾಸನದಲ್ಲಲ್ಲ, ಯಾವ ಪೀಠದಲ್ಲಲ್ಲ. ರಾಮಚಂದ್ರನ ಪಾದದ ಬಳಿ. ಭಗವಂತನ ಪಾದವನ್ನು ಒತ್ತುತ್ತಾ ಆನಂದತುಂದಿಲರಾಗಿರುವವರು ಹನುಮಂತ ದೇವರು. ಲಕ್ಷ್ಮಣನೂ ಪಾದಸೇವನೆಯಿಂದಲೇ ರಾಮಚಂದ್ರನನ್ನು ಒಲಿಸಿಕೊಂಡವ.

ಅರ್ಚನೆ :

ಅರ್ಚನೆಯಿಂದ ಭಗವಂತನನ್ನು ಒಲಿಸಿಕೊಳ್ಳಬಹುದೆಂಬುದಕ್ಕೆ ಧರ್ಮರಾಜ ಉದಾಹರಣೆಯಾಗಿರುವವ. ರಾಜಸೂಯ ಯಾಗದಲ್ಲಿ ಕೃಷ್ಣನಿಗೆ ಅಗ್ರಪೂಜೆ ಮಾಡುವ ಮೂಲಕ ಅರ್ಚನೆಯ ಮಹತ್ವವನ್ನು ತಿಳಿಸಿಕೊಟ್ಟ. ಗಜೇಂದ್ರ, ಶಬರಿ, ಶರಭಂಗ ಇವರೆಲ್ಲರೂ ಅರ್ಚನೆಯ ಮೂಲಕ ಭಗವಂತನನ್ನು ಒಲಿಸಿಕೊಂಡವರು.

ವಂದನ :

ಭಗವಂತನನ್ನು ವಂದನೆಯ ಮೂಲಕ ಒಲಿಸಿಕೊಂಡವಳು ಕುಂತಿದೇವಿ. ಕೃಷ್ಣ ಲೌಕಿಕವಾಗಿ ತನ್ನ ಮಗನ ಸಮಾನವಯಸ್ಕನಾದವ. ಹಾಗಿದ್ದರೂ ಆಕೆಗೆ ಲೌಕಿಕವಾದ ಯಾವ ಬಂಧನವೂ ನಮಸ್ಕಾರಕ್ಕೆ ಪ್ರತಿಬಂಧಕವಾಗಲಿಲ್ಲ. ಕೃಷ್ಣನನ್ನು ಸರ್ವೋತ್ತಮನೆಂಧು ತಿಳಿದು ಆತನಿಗೆ ನಮಸ್ಕರಿಸಿ ಸ್ತುತಿಸಿದಳು. ಆತನ ಅನುಗ್ರಹಕ್ಕೆ ಪಾತ್ರಳಾದಳು.

ದಾಸ್ಯ :

ಹನುಮಂತದೇವರಲ್ಲದೆ ಇನ್ಯಾರು ದಾಸ್ಯಕ್ಕೆ ಉದಾಹರಣೆಯಾದಾರು? 'ದಾಸೋಽಹಂ ಕೋಸಲೇಂದ್ರಸ್ಯ' ಎಂದು ರಾವಣನ ಬಳಿ ತಾನು ರಾಮನ ದಾಸನೆಂದೇ ಪರಿಚಯಿಸಿಕೊಂಡವರು ಹನುಮಂತದೇವರು. ಈ ದಾಸ್ಯವೇ ಇಡಿಯ ಜಗತ್ತು ಅವರ ದಾಸರಾಗುವಂತೆ ಮಾಡಿತು. ಇದಲ್ಲದೆ ಉದ್ಧವನೂ ದಾಸನಾಗಿ ಕೃಷ್ಣನನ್ನು ಒಲಿಸಿಕೊಂಡವ. ಕೃಷ್ಣ ತೊಟ್ಟ ವಸ್ತ್ರ, ಕೃಷ್ಣ ಉಂಡ ಅನ್ನ, ಕೃಷ್ಣ ಪೂಸಿಕೊಂಡ ಗಂಧ ಹೀಗೆ 'ತವ ದಾಸಾಃ' ಎಂದು ತನ್ನನ್ನು ಕೃಷ್ಣ ದಾಸನಾಗಿ ಕಂಡವ ಉದ್ಧವ.

ಸಖ್ಯ :

ಭಗವಂತನನ್ನು ತನ್ನ ಸಖನಾಗಿಸಿಕೊಂಡವ ಅರ್ಜುನ. ಭಗವಂತನ ಸಖ್ಯದಿಂದ ಏನನ್ನೂ ಸಾಧಿಸಬಹುದೆಂಬುದಕ್ಕೆ ಆತನೇ ಉದಾಹರಣೆ.

ಆತ್ಮನಿವೇದನ :

ಆತ್ಮನಿವೇದನೆಗೆ ಬಲಿಚಕ್ರವರ್ತಿ ಉದಾಹರಣೆ. ತನ್ನ ಸರ್ವಸ್ವವನ್ನೂ ಭಗವಂತನಿಗೆ ಸಮರ್ಪಿಸಿ ಭಗವಂತನನ್ನು ಒಲಿಸಿಕೊಂಡ. ಅದಕ್ಕೆ

ಪ್ರತಿಯಾಗಿ ವಾಮನ ತನ್ನನ್ನು ಬಲಿಚಕ್ರವರ್ತಿಗೆ ಅರ್ಪಿಸಿದ. ಅಂದರೆ ಆತನ ಮನೆಯ ದ್ವಾರಪಾಲಕನಾದ.

ಆಚಾರ್ಯ ಮಧ್ವರು - ನವವಿಧ ಭಕ್ತಿ

ಆಚಾರ್ಯ ಮಧ್ವರ ಚರಿತ್ರೆಯನ್ನೊಮ್ಮೆ ಅವಲೋಕಿಸಿದಾಗ ಈ ನವವಿಧ ಭಕ್ತಿಯನ್ನು ಚೆನ್ನಾಗಿ ಕಾಣಬಹುದು.

ಶ್ರವಣ : ಆಚಾರ್ಯರು ತಾವು ಉತ್ತರ ಬದರಿಗೆ ತೆರಳಿದರು. ಅಲ್ಲಿ ವೇದವ್ಯಾಸರನ್ನು ಕಂಡು ನಮಸ್ಕರಿಸಿದರು. ವೇದವ್ಯಾಸರಿಂದ ರಹಸ್ಯ ವಿಚಾರಗಳನ್ನು ಕೇಳಿದರು. ವಸ್ತುತಃ ಆಚಾರ್ಯರು ಸರ್ವಜ್ಞಮೂರ್ತಿಗಳು. ಹಾಗಿದ್ದರೂ ತಾವು ಕೇಳಿದರು. ಹೇಗೆಂದರೆ ಸಮುದ್ರ ಸ್ವತಃ ತಾನೇ ಪೂರ್ಣವಾಗಿದ್ದರೂ ನದಿಯ ನೀರು ಬಂದರೆ ಹೇಗೆ ಅದನ್ನು ಸ್ವೀಕರಿಸುತ್ತದೆಯೋ ಹಾಗೆಯೇ ಆಚಾರ್ಯರು ಸ್ವತಃ ತಾವೇ ಸರ್ವಜ್ಞರಾಗಿದ್ದರೂ ವೇದವ್ಯಾಸರಿಂದ ಮತ್ತಷ್ಟು ಕೇಳಿದರು. ಎಲ್ಲವನ್ನು ತಿಳಿದವರಿಗೂ ಶ್ರವಣದ ಅವಶ್ಯಕತೆಯಿದೆಯೆಂದು ಶ್ರವಣದ ಮಹತ್ವವನ್ನು ತೋರಿಸಿದರು.

ಕೀರ್ತನ : ಆಚಾರ್ಯರು ಕೀರ್ತನೆಗೆ ಬಹಳಷ್ಟು ಒತ್ತು ಕೊಟ್ಟವರು. ತಾವು ಸೂರ್ಯೋದಯದಿಂದ ಸೂರ್ಯ ನಡುನೆತ್ತಿಗೆ ಬರುವವರೆಗೂ ನಿರಂತರ ಪಾಠವನ್ನು ಮಾಡುತ್ತಿದ್ದವರು. ಮಧ್ಯಾಹ್ನ ಸೂರ್ಯಾಸ್ತದವರೆಗೆ ನಿರಂತರ ಪ್ರವಚನ ನಡೆಸಿ ಕೀರ್ತನೆಯ ಮಹತ್ವವನ್ನು ತೋರಿಸಿದವರು. ಇಷ್ಟೇ ಅಲ್ಲದೆ, ಬದರಿಯಲ್ಲಿ ನಾರಾಯಣನ ಸನ್ನಿಧಾನದಲ್ಲಿ ನಡೆಸಿದ ಗೀತಾಭಾಷ್ಯ ಪ್ರವಚನದಿಂದ ಸಂತುಷ್ಟನಾದ ಭಗವಂತ ಆಚಾರ್ಯರಿಗೆ

ರಾತ್ರಿಯ ವೇಳೆಯಲ್ಲಿ ಪ್ರವಚನ ಮಾಡಲು ಆದೇಶಿಸಿದರೆ ಕೂಡಲೇ ಶಿಷ್ಯರನ್ನು ಎಬ್ಬಿಸಿ ಕೊರೆಯುವ ಚಳಿಯಲ್ಲೂ ಪಾಠವನ್ನು ಮಾಡಿ 'ತದ್ಧಿತಪಃ' ಎಂದು ಪಾಠ-ಪ್ರವಚನವನ್ನು ಭಕ್ತಿ-ಶ್ರದ್ಧೆಯಿಂದ ನಡೆಸುವುದೇ ದೊಡ್ಡ ತಪಸ್ಸೆಂದು ಕೀರ್ತನೆಯ ಮಹತ್ವವನ್ನು ಜಗತ್ತಿಗೆ ತಿಳಿಯಪಡಿಸಿದವರು.

ಸ್ಮರಣ : ಸಂಸ್ಮರಣೆ ಮಾತ್ರದಿಂದಲೇ ನಮ್ಮ ಎಲ್ಲ ಪಾಪಗಳೂ ಪರಿಹಾರವಾಗುತ್ತದೆಂದು ಆಚಾರ್ಯರು ಗಟ್ಟಿಯಾಗಿ ಸಾರಿದವರು. ತಾವು ಯಾವತ್ತೂ ಒಂದು ಕ್ಷಣವೂ ಬಿಡದೆ ಭಗವಂತನನ್ನು ಸ್ಮರಿಸುತ್ತಿದ್ದವರು ಆಚಾರ್ಯರು. ತನ್ನನ್ನು ಪರೀಕ್ಷಿಸಲು ಬಂದ ಜಟ್ಟಿಗಳು ಕುತ್ತಿಗೆಯನ್ನು ಹಿಚುಕುವಾಗಲೂ ಭಗವಂತನ ಸ್ಮರಣೆಯನ್ನು ಮತ್ತಷ್ಟು ಗಟ್ಟಿಯಾಗಿ ಮಾಡಿ ಸ್ಮರಣೆಯ ಮಹತ್ವವನ್ನು ತೋರಿಸಿಕೊಟ್ಟವರು ಶ್ರೀಮದಾಚಾರ್ಯರು.

ಪಾದಸೇವನೆ : ಆಚಾರ್ಯರು ವೇದವ್ಯಾಸರ ಪಾದಸೇವನೆಯನ್ನು ನಿರಂತರ ಮಾಡಿದವರು.ಈಗಲೂ ಉತ್ತರ ಬದರಿಯಲ್ಲಿ ವೇದವ್ಯಾಸರ ಪಾದಸೇವೆಯನ್ನು ಮಾಡುತ್ತಾ ನೆಲೆಸಿರುವವರು. ಮೊದಲ ಬಾರಿಗೆ ಆಚಾರ್ಯರು ವೇದವ್ಯಾಸಾಶ್ರಮಕ್ಕೆ, ಅಲ್ಲಿಂದ ನಾರಾಯಣಾಶ್ರಮಕ್ಕೆ ತೆರಳಿ ಅಲ್ಲಿಯೇ ನೆಲೆಸಿಬಿಡುವುದಾಗಿ ತೀರ್ಮಾನಿಸಿದರು. ನಾರಾಯಣ ಋಷಿಗಳು ಮರಳಿ ಈ ಭೂಮಿಗೆ ಹೋಗಲು ಆದೇಶಿಸಿದರೂ ನಿಮ್ಮ ಪಾದಸೇವೆಯನ್ನು ಬಿಟ್ಟು ನನಗೆ ಬೇರಾವುದೂ ಬೇಡೆಂದು ಆಚಾರ್ಯರು ಹೇಳಿ ಪಾದಸೇವೆಯ ಮಹತ್ವವನ್ನು ತಿಳಿಸಿದ್ದಾರೆ.

ಅರ್ಚನ : ಭಗವಂತನ ಅರ್ಚನೆಯನ್ನು ಮಾಡ ಬೇಕೆಂದು ಆಚಾರ್ಯರು ತಿಳಿಸಿದ್ದು ಮಾತ್ರವಲ್ಲ ತಾವೂ ನಿರಂತರವಾಗಿ ಭಗವಂತನನ್ನು

ಅರ್ಚಿಸಿ ಮೆಚ್ಚಿಸಿದವರು. ಅದಕ್ಕಾಗಿಯೇ ಕೃಷ್ಣನ ಪ್ರತಿಮೆಯನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಆಚಾರ್ಯರ ಪೂಜೆ ಯಾವುದೇ ದೋಷರಹಿತವಾಗಿತ್ತೆಂದು ಮಧ್ವವಿಜಯವೇ ತಿಳಿಸಿದೆ. ಆದ್ದರಿಂದಲೇ ಆಚಾರ್ಯರು ಪೂಜಿಸುತ್ತಿದ್ದ ಅರ್ಚಾಪ್ರತಿಮೆಗಳಿಂದ ಮರುದಿನ ನಿರ್ಮಾಲ್ಯವನ್ನು ತೆಗೆದರೆ ಅದರಲ್ಲಿ ಅಮೃತದ ಬಿಂದುಗಳು ಕಾಣುತ್ತಿದ್ದವಂತೆ.

ವಂದನ : ನಾವು ಕೇವಲ ಪ್ರತಿಮೆಯಲ್ಲಿ ಭಗವಂತನನ್ನು ಕಂಡು ನಮಸ್ಕರಿಸಿದರೆ ಆಚಾರ್ಯರು ಎಲ್ಲ ಕಡೆಯೂ ಭಗವಂತನನ್ನು ಕಂಡು ನಮಸ್ಕರಿಸುತ್ತಿದ್ದವರು. ಸಣ್ಣ ಮಗುವಾಗಿದ್ದಾಗಲೇ ತಮ್ಮ ತಂದೆ-ತಾಯಿಯರೊಡನೆ ವಿಶೇಷ ಸಮಾರಂಭಕ್ಕೆ ತೆರಳಿದವರು ಎಲ್ಲರೂ ತಮ್ಮ ಕಾರ್ಯಗಳಲ್ಲಿ ಮಗ್ನರಾಗಿದ್ದರೆ ತಾವೊಬ್ಬರೇ ಅಲ್ಲಿಂದ ಹೊರಟು ಕೊಡವೂರು, ಬನ್ನಂಜೆ ದೇವಾಲಯಗಳಲ್ಲಿರುವ ನಾರಾಯಣನನ್ನು ವಂದಿಸುತ್ತಾ ಅನಂತೇಶ್ವರಕ್ಕೆ ಬಂದು ನಿಂತವರು. ಆಚಾರ್ಯರ ವಂದನೆ ಕೇವಲ ಮನುಷ್ಯರಿಗೆ ಮಾತ್ರವಲ್ಲ, ದೇವತೆಗಳಿಗೂ ಆದರ್ಶಪ್ರಾಯ-ವಾಗಿತ್ತೆಂದು 'ಮಧ್ವವಿಜಯ' ತಿಳಿಸುತ್ತದೆ.

ದಾಸ್ಯ : ದಾಸ್ಯವೆಂಬುದು ಆಚಾರ್ಯರ ಜೀವನಕ್ಕೆ ಹೇಳಿಮಾಡಿಸಿದಂತಿದೆ. ಏಕೆಂದರೆ ಜೀವನದುದ್ದಕ್ಕೂ ಆಚಾರ್ಯರು ತಾನು ಭಗವಂತನ ದಾಸನೆಂದೇ ಹೇಳಿದವರು. ನಾನೇ ದೇವರು ಎಂಬ 'ಸೋಹಂ' ಭಾವವನ್ನು ಉಗ್ರವಾಗಿ ಖಂಡಿಸಿ, 'ದಾಸೋಹಂ' ಎಂಬ ಭಾವನೆಯನ್ನು ಬೆಳೆಸಿದವರು. ನಾನೇ ದೇವರಾದರೆ ಅಥವಾ ನಾನು ದೇವರಿಗೆ ಸಮಾನನಾದರೆ ದಾಸ್ಯಕ್ಕೆಲ್ಲಿದೆ ಅವಕಾಶ? ಆದ್ದರಿಂದ

ದಾಸ್ಯವೆಂಬುದು ಕೇವಲ ಆಚಾರ್ಯರಿಗೆ, ಅವರ ಸಿದ್ಧಾಂತಕ್ಕೆ ಮಾತ್ರ ಸರಿಹೊಂದುವಂಥದ್ದು. ಆದ್ದರಿಂದಲೇ ಈ ದಾಸ್ಯ ಒಂದು ಪರಂಪರೆಯಾಗಿ ಬೆಳೆದು ಬಂದು 'ದಾಸಸಾಹಿತ್ಯ' ಎಂದೇ ಪ್ರಖ್ಯಾತವಾಯಿತು.

ಸಖ್ಯ : ಆಚಾರ್ಯರು ತಮ್ಮ ಗ್ರಂಥಗಳಲ್ಲಿ 'ಪರಮಃ ಸುಹೃತ್', 'ಪ್ರೇಷ್ಠ ಪ್ರೇಷ್ಠತಮಾಯ ಮೇ' ಎಂದು ಅನೇಕ ಕಡೆ ತನಗೆ ಭಗವಂತನೇ ಅತ್ಯಂತ ಪ್ರಿಯಸಖನೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆಚಾರ್ಯರು ಬದರಿಗೆ ತೆರಳಿದಾಗ ಅಲ್ಲಿ ವೇದವ್ಯಾಸರು ತೋರಿದ ಪ್ರೀತಿ, ಅಲ್ಲಿಂದ ನಾರಾಯಣಾಶ್ರಮಕ್ಕೆ ಕರೆದುಕೊಂಡು ಹೋದ ರೀತಿ ನೋಡಿದಾಗ ಆಚಾರ್ಯರಿಗೆ ಭಗವಂತ ಎಷ್ಟು ಸಖನಾಗಿದ್ದನೆಂಬುದು ಅರಿವಾಗುತ್ತದೆ.

ಆತ್ಮನಿವೇದನ : ಆಚಾರ್ಯರಲ್ಲಿ ಮುಖ್ಯವಾಗಿ ಕಾಣುವ ಲಕ್ಷಣವಿದು. ಆಚಾರ್ಯರು ತಮ್ಮ ಇಡಿಯ ಜೀವನವನ್ನೇ ಭಗವಂತನಿಗಾಗಿ ಸಮರ್ಪಿಸಿದವರು. ಸ್ವಾರ್ಥ ಅವರ ಬಳಿ ಒಮ್ಮೆಯೂ ಸುಳಿಯಲಿಲ್ಲ. ತಮ್ಮ ಗ್ರಂಥಗಳಲ್ಲೂ **'ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಪರಸ್ಮೈ ಸನ್ನಿವೇದಯೇತ್'** ಎಂದು ಆದೇಶಿಸಿ, ಸರ್ವಸಮರ್ಪಣೆಯ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಹೀಗೆ ಪ್ರಹ್ಲಾದ ರಾಜರು ಜಗತ್ತಿನ ಸ್ವಾಮಿಯಾದ ಭಗವಂತನ ಭಕ್ತಿಗೆ ಬೇಕಾದ ಒಂಬತ್ತು ಮಜಲುಗಳನ್ನು ತೋರಿಸಿ ಮಹದುಪಕಾರ ಮಾಡಿದ್ದಾರೆ.

★



ಭಗವಂತನ ಸಾಕ್ಷಾತ್ಕಾರ ಆಗಬೇಕಾದರೆ ದೇವರಲ್ಲಿ ಭಕ್ತಿ ಮಾಡಲೇಬೇಕು. ಆ ಭಕ್ತಿ ಹೇಗೆ ಬರುವುದೆಂದು ಪ್ರಶ್ನೆ ಮೂಡಿದರೆ ಅದಕ್ಕೆ ಒಂಬತ್ತು ಮೆಟ್ಟಿಲುಗಳನ್ನು ಏರಿಹೋಗಬೇಕೆಂದು ಪ್ರಹ್ಲಾದ ತಿಳಿಸುತ್ತಾನೆ. ಅಂದರೆ ಒಂಬತ್ತು ತರಹದ ಭಕ್ತಿಯಲ್ಲ, ಒಂಬತ್ತು ಸೇರಿದಾಗ ಭಕ್ತಿ. ಭಕ್ತಿಯನ್ನು ಯಾರಲ್ಲೂ ಹುಟ್ಟಿಸಲು ಸಾಧ್ಯವಿಲ್ಲ. ವ್ಯಕ್ತಿಯ ಒಳಗೆ ಅವ್ಯಕ್ತವಾಗಿ ಬೂದಿಮುಚ್ಚಿದ ಕೆಂಡದಂತಿದ್ದರೆ ಅದನ್ನು ಅಭಿವ್ಯಕ್ತಗೊಳಿಸಬಹುದಷ್ಟೆ.

– ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು